School Leadership

TESS India

# Perspective on leadership: using data on diversity to improve your school

## ನಾಯಕತ್ವದ ದೃಷ್ಟಿಕೋನ: ವೈವಿಧ್ಯತೆಯ ಕುರಿತು ಇರುವ ದತ್ತಾಂಶಗಳನ್ನು ಶಾಲಾ ಸುಧಾರಣೆಗೆ ಬಳಸುವುವುದು





Teacher Education through School-based Support in India
www.TESS-India.edu.in

The Open University

UKaid from the British people

cc BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ (Open Educational Resource-OER)** ಶಾಲೆಯಲ್ಲಿ ಭೋದನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಚಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿಧ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾರ್ಥದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಭೋದನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಭೋದನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಭೋದನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಪೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ** ಬಗ್ಗೆ

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL10v1*
*Karnataka*

*Except for third party materials and othe errwwise stated, this content is made available unde err a Creative Commons Attribution-ShareAlike licence: http://creaat tivecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಈ ಘಟಕ ಎಂದರೇನು ಎಂಬುದರ ಕುರಿತು

ಭಾರತದಲ್ಲಿ ವೈವಿಧ್ಯತೆಯ ಪರಿಮಾಣ ಅಗಾಧವಾದದ್ದು. ಈ ವೈವಿಧ್ಯತೆ ಜನಾಂಗ, ಬಣ್ಣ,ಲಿಂಗ, ಭಾಷೆ, ಧರ್ಮ, ಜಾತಿ, ಆಶೆಗಳು,ಸಮುದಾಯ, ಸಾಮಾಜಿಕ ಗುಂಪು,ಆರ್ಥಿಕ ಸ್ಥಾನಮಾನ, ಸಾಕ್ಷರತೆಯ ಮಟ್ಟ, ಸಾಮರ್ಥ್ಯದ ಮಟ್ಟ, ಆರೋಗ್ಯದ ಹಂತಗಳು, ವೃತ್ತಿಗಳು, ಭೌಗೋಳಿಕ ಪ್ರಾಂತ್ಯಗಳು,ಹವಾಮಾನ ಮತ್ತು ರಾಜಕೀಯ ಪ್ರೇರೇಪಣೆಗಳು ಮೂಲಕ ಪ್ರತಿಬಿಂಬಿಸುತ್ತದೆ. ಸಾಂಪ್ರದಾಯಿಕವಾಗಿ ಹೇಳುವುದಾದರೆ, ವೈವಿಧ್ಯತೆಯನ್ನು ಕೆಲವೊಮ್ಮೆ ವ್ಯತ್ಯಗಳು ಎಂದೂ ಕೂಡ ಹೇಳಲಾಗುತ್ತದೆ ಮತ್ತು ಅವುಗಳನ್ನು 'ಸಮಸ್ಯೆಯೆಂದು' ಪರಿಗಣಿಸಲಾಗಿದ್ದು – ಸಂಪನ್ಮೂಲವೆಂದು ಅಂದುಕೊಳ್ಳದೆ ಅದನ್ನು ಅಸಹಜವೆಂದು ನೋಡಲಾಗುತ್ತದೆ. ಅದೇನೆ ಇರಲಿ ವೈವಿಧ್ಯತೆಯನ್ನು ಒಂದು ಆಸ್ತಿಯೆಂದೇ ಅರ್ಥಮಾಡಿಕೊಳ್ಳುವುದು ಶಾಲಾ ಶಿಕ್ಷಣದಲ್ಲಿ ಅಭಿವೃದ್ಧಿಯನ್ನು ತರುವಲ್ಲಿ ಮುಖ್ಯವಾಗುತ್ತದೆ.

ಶಾಲಾ ನಾಯಕರಿಗೆ ವೈವಿಧ್ಯತೆಯನ್ನು ನಿರ್ವಹಿಸುವುದರೊಂದಿಗೆ ಶಾಲಾ ಸಮುದಾಯದಲ್ಲಿನ ಪ್ರತಿಯೊಂದು ಮಗುವಿಗೂ ಸಮಾನವಾದ ಅವಕಾಶಗಳನ್ನು ಕೊಟ್ಟು, ಅರ್ಥಪೂರ್ಣವಾದ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಬಹು ದೊಡ್ಡ ಸವಾಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಇತ್ತೀಚಿಗೆ ಪರಿಚಯಿಸಲಾದ ನ್ಯಾಷನಲ್ ಕರಿಕ್ಯುಲಮ್ ಫ್ರೇಮ್ ವರ್ಕ್ (NCF) ಮತ್ತು ಶಿಕ್ಷಣದ ಹಕ್ಕು ಕಾಯಿದೆ 2009(RTE) ಇವೆರೆಡರ ದ್ವಂದ್ವಗಳು ಮತ್ತು ವೈರುಧ್ಯಗಳು ಮುಜುಗರವನ್ನು ಉಂಟುಮಾಡುತ್ತವೆ. ಶಾಲಾ ನಾಯಕರು ತಮ್ಮ ಸಿಬ್ಬಂದಿ ಈ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಳ್ಳುವುದನ್ನು ನಿರೀಕ್ಷಿಸುವುದರೊಂದಿಗೆ, ವಿದ್ಯಾರ್ಥಿಗಳನ್ನು ಕಲಿಯುವ ಸಂಪನ್ಮೂಲವೆಂದು ಮತ್ತು ಪ್ರತಿಯೊಂದು ತರಗತಿಯಲ್ಲಿ ಪರಿಗಣಿಸಬೇಕೆಂದು ನಿರೀಕ್ಷಿಸುತ್ತಾರೆ. ಮುಂದುವರೆದು, ತಮ್ಮ ವಿದ್ಯಾರ್ಥಿಗಳು ಮತ್ತು ಪೋಷಕರ ಬಗ್ಗೆ ವಿವರವಾದ ಮಾಹಿತಿಯನ್ನು ಕಲೆ ಹಾಕುವುದು ಮುಖ್ಯವಾಗುತ್ತದೆ ಏಕೆಂದರೆ ಇವುಗಳು ಸಾಮಾಜಿಕ ಬಂಡವಾಳದ , ಆಂತರಿಕ ಸೌಲಭ್ಯಗಳು,ಪಠ್ಯವಿಷಯಗಳ ಬಗ್ಗೆ ಮಾಹಿತಿ ಮತ್ತು ಸೌಲಭ್ಯಗಳ ಅಭಿವೃದ್ಧಿ ಬಗ್ಗೆ ಮೊದಲ ಪ್ರಮುಖ ಹೆಜ್ಜೆಯಾಗುತ್ತದೆ,

ತಮ್ಮ ಶಾಲೆಯಲ್ಲಿನ ವೈವಿಧ್ಯತೆಯ ಬಗ್ಗೆ ಸ್ಪಷ್ಟವಾಗಿ ಮತ್ತು ಅರ್ಥಮಾಡಿಕೊಳ್ಳಲು ಅಭಿವೃದ್ಧಿಪಡಿಸಲು ಪ್ರಮುಖವಾದ ಅಂಶವೇ ಅಂಕಿ–ಅಂಶಗಳು. ವೈವಿಧ್ಯತೆಯ ಕುರಿತಾದ ಅಂಕಿ–ಅಂಶಗಳು ಶಾಲಾ ನಾಯಕರಿಗೆ ಸಹಾಯವಾಗುತ್ತದೆ:

- ಬಹುಮುಖ್ಯವಾದ ಕ್ಷೇತ್ರಗಳು ಮತ್ತು ಸಮಸ್ಯೆಗಳನ್ನು ಗುರುತಿಸುವುದು
- ಶಾಲಾ ನಿರ್ವಹಣಾ ಸಮಿತಿಯೊಂದಿಗೆ ಜೊತೆಯಾಗಿ ಕ್ರಿಯಾ ಯೋಜನೆಯನ್ನು ರೂಪಿಸುವುದು
- ಇನ್ನಿತರ ಶಿಕ್ಷಕರೊಂದಿಗೆ ಮತ್ತು ಸ್ಥಳೀಯ ಸಮುದಾಯದೊಂದಿಗೆ ಕ್ರಿಯಾಯೋಜನೆಯನ್ನು ಜಾರಿಗೊಳಿಸುವುದು
- ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣದ ಬೋಧನೆ ಮತ್ತು ಕಲಿಕೆಯನ್ನು ಸಮಾನವಾಗಿ ಸಿಗುವಂತಾಗಲು ಮಾಡುವ ಪರಿಣಾಮಕಾರಿ ಬದಲಾವಣೆಗಳ ಉಸ್ತುವಾರಿ ಮತ್ತು ಅದರ ಅಳೆಯುವಿಕೆ

ಈ ಘಟಕದಲ್ಲಿ ನೀವು ಸ್ಥಳೀಯ ಸಾಮಾಜಿಕ–ಆರ್ಥಿಕ, ಸಾಂಸ್ಕೃತಿಕ ಮತ್ತು ಭಾಷಿಕ ಹಿನ್ನೆಲೆಗಳನ್ನು ಗುರುತಿಸುತ್ತೀರಾ. ಮಾತ್ರವಲ್ಲಾ ಈ ಕುರಿತಾದ ಅಂಕಿ–ಅಂಶಗಳನ್ನು ನೀವು ಹೇಗೆ ಕಲೆ ಹಾಕುವುದು ಮತ್ತು ಅದನ್ನು ನಿಮ್ಮ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಅವುಗಳನ್ನುಬಳಸುವುದರ ಬಗ್ಗೆ ಜಾಗೃತರಾಗಿ, ಅರ್ಥಮಾಡಿಕೊಂಡು ಮತ್ತು ವೈವಿಧ್ಯತೆಯನ್ನು ಮೆಚ್ಚಿಕೊಳ್ಳುವುದರೊಂದಿಗೆ, ಎಲ್ಲಾ ವಿದ್ಯಾರ್ಥಿಗಳ ಕಲಿಕೆಯಿಂದ ಬರುವ ಫಲಿತಾಂಶಗಳು ಮತ್ತು ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆಯೂ ಗಮನಹರಿಸುತ್ತೀರಾ.

ಈ ಘಟಕವನ್ನು ನಿಮ್ಮ ಶಾಲೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತೇಜಿಸುವುದು ನಿಮಗೆ ಮುಂದುವರೆಸಲು ಅನುಕೂಲವಾಗುತ್ತದೆ.

## ಕಲಿಕಾ ಡೈರಿ

**ಈ** ಘಟಕದಲ್ಲಿ ಕೆಲಸ ಮಾಡುವಾಗ ನಿಮ್ಮ ಕಲಿಕಾ ಡೈರಿಯಲ್ಲಿ ಟಿಪ್ಪಣಿ ಮಾಡಿಕೊಳ್ಳಲಾಗುವುದು ಹೇಳಲಾಗುವುದು, ಇದೊಂದು ಪುಸ್ತಕ ಅಥವಾ ಕೈಪಿಡಿಯಾಗಿದ್ದು, ಒಂದೇ ಕಡೆ ನಿಮ್ಮೆಲ್ಲಾ ಆಲೋಚನೆಗಳು ಮತ್ತು ಯೋಜನೆಗಳನ್ನು ಬರೆಯಲು ಬಳಸಲಾಗುವುದು. ಆದರೆ ನೀವು ಈಗಾಗಲೇ ಬರೆಯಲು ಆರಂಭಿಸಿರುತ್ತೀರಾ.

ಈಗಾಗಲೇ ಈ ಘಟಕದ ಬಗ್ಗೆ ನೀವೊಬ್ಬರೆ ಕೆಲಸ ಮಾಡಲು ಆರಂಭಿಸಿರಬಹುದು, ಆದರೆ ನಿಮಗೆ ಮತ್ತೊಬ್ಬ ಶಾಲೆಯ ನಾಯಕರೊಂದಿಗೆ ಚರ್ಚಿಸಲು ಸಾಧ್ಯವಾದರೆ ಮತ್ತಷ್ಟು ಕಲಿಯಬಹುದು. ಇವರು ನಿಮ್ಮ ಸಹದ್ಯೋಗಿಯಾಗಿದ್ದು ಈಗಾಗಲೇ ಅವರೊಂದಿಗೆ ಜಂಟಿಯಾಗಿ ಕೆಲಸ ಆರಂಬಿಸಬಹುದು ಅಥವಾ ಮತ್ತೊಬ್ಬರೊಂದಿಗೆ ಹೊಸದಾಗಿ ಸಂಬಂಧವನ್ನು ಬೆಸೆಯುವವರಾಗಿರಬಹುದು. ಇದನ್ನು ವ್ಯವಸ್ಥಿತವಾಗಿ ಅಥವಾ ಅನೌಪಚಾರಿಕ ರೀತಿಯಲ್ಲಿ ಮಾಡುವುದಾಗಿರಬಹುದು. ನೀವು ಕಲಿಕಾ ಡೈರಿಯಲ್ಲಿ ಬರೆದುಕೊಂಡಿರುವ ಟಿಪ್ಪಣಿಗಳು ಇಂತಹ ಸಭೆಗಳಲ್ಲಿ ಹಂಚಿಕೊಳ್ಳಲು ಸಹಾಯವಾಗಬಲ್ಲದು, ಇದರೊಂದಿಗೆ ನಿಮ್ಮ ದೀರ್ಘಾವಧಿಯ ಅಭಿವೃದ್ಧಿ ಮತ್ತು ಕಲಿಕೆಯನ್ನು ಗುರುತಿಸಲು ಸಹಾಯವಾಗಬಹುದು

# ಈ ಘಟಕದಲ್ಲಿ ಶಾಲಾ ನಾಯಕರು ಏನನ್ನು ಕಲಿಯಬಹುದು

- ವೈವಿಧ್ಯತೆಗೆ ಪ್ರಾಮುಖ್ಯತೆಯು ಪ್ರತಿವರ್ಷವೂ ವಿದ್ಯಾರ್ಥಿಗಳು ಕಲಿಕೆಯಲ್ಲಿ ಗರಿಷ್ಠಮಟ್ಟದಲ್ಲಿ ಸಾಧನೆಯನ್ನು ಮಾಡಿರುತ್ತಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದು

- ವಿವಿಧ ರೀತಿಯ ಅಂಕಿ–ಅಂಶಗಳು ಮತ್ತು ಸಂಗ್ರಹಿಸಿದ ಅಂಕಿ–ಅಂಶಗಳ ಸ್ವರೂಪ  ನಿಮ್ಮ ಶಾಲೆಯಲ್ಲಿನ ವೈವಿಧ್ಯತೆಯಲ್ಲಿನ ಸಮಸ್ಯೆಗಳೊಂದಿಗೆ ವ್ಯವಹರಿಸುವುದು ಮತ್ತು ಅರ್ಥಮಾಡಿಕೊಳ್ಳಲು ಉಪಯೋಗವಾಗುವುದು

- ಎಲ್ಲಾ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶ ಉತ್ತಮವಾಗಿಸಲು ಮತ್ತು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸಂಗ್ರಹಿಸಿದ ಅಂಕಿ–ಅಂಶಗಳನ್ನು ಬಳಸಿಕೊಳ್ಳುವುದು

- ಸ್ಥಳೀಯ ಸಮುದಾಯ ಮತ್ತು ಶಿಕ್ಷಕರನ್ನು ಜೊತೆಯಾಗಿ ಮುಂದಾಳತ್ವವನ್ನು ವಹಿಸಲು, ಎಲ್ಲಾ ವಿದ್ಯಾರ್ಥಿಗಳ ಫಲಿತಾಂಶಗಳು ಉತ್ತಮವಾಗಿರುವಂತೆ ಖಚಿತಪಡಿಸಿಕೊಳ್ಳಲು ವೈವಿಧ್ಯತೆಯ ಕುರಿತಾದ ಅಂಕಿ– ಅಂಶಗಳ ಬಳಕೆ ಮತ್ತು ವಿಶ್ಲೇಷಣೆ ಮಾಡಲು

# 1 ವೈವಿಧ್ಯತೆಯ ವಿಷಯಗಳೊಂದಿಗೆ ವ್ಯವಹರಿಸುವುದರ ಪ್ರಾಮುಖ್ಯತೆ



**ಚಿತ್ರ 1 ಪ್ರತಿಯೊಂದು ಶಾಲೆಯಲ್ಲೂ ವೈವಿಧ್ಯತೆಯಿದೆ**

ಯಶಸ್ವೀ ಸರ್ಕಾರಗಳು ವೈವಿಧ್ಯತೆಯನ್ನು ಆಚರಿಸುವ ಸಮುದಾಯಗಳನ್ನು ಶಿಕ್ಷಣದಲ್ಲಿ ಕೇಂದ್ರೀಕೃತ ಪಾತ್ರವನ್ನು ವಹಿಸಲು ಆಂತರೀಕರಣಗೊಳಿಸುವುದನ್ನು ಗುರುತಿಸುತ್ತವೆ. ನೀವು ಶಾಲಾ ನಾಯಕರಾಗಿ ನಿಮ್ಮ ಶಾಲಾ ಸಮುದಾಯದಲ್ಲಿ ಚಾಲ್ತಿಯಲ್ಲಿರುವ ವೈವಿಧ್ಯತೆಯನ್ನು ಗುರುತಿಸಲು ಮತ್ತು ಈ ವೈವಿಧ್ಯತೆಯನ್ನು ಕಲಿಕೆಗೆ ಸಂಪನ್ಮೂಲವಾಗಿ ಮತ್ತು ಅವಕಾಶವಾಗಿ ಎಷ್ಟು ಉತ್ತಮವಾಗಿ ಬಳಸಿಕೊಳ್ಳಬಹುದು ಸಮರ್ಥರಿರಬೇಕು.

ಎನ್‌ಸಿಎಫ್ (2005, ಪು.9) ಹೇಳಿರುವ ಗುಣಮಟ್ಟದ ಶಿಕ್ಷಣವನ್ನು ಆಂತರೀಕರಣಗೊಳಿಸುವುದರ ಅಗತ್ಯತೆ ಮತ್ತು ಸಮಾನತೆಯೊಂದಿಗೆ ಇದರ ಸಮ್ಮಿಳಿತದ ಅಗತ್ಯತೆಯ ಹಿಂದಿರುವ ವೈಚಾರಿಕತೆಯ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

> ಶಿಕ್ಷಣ ವ್ಯವಸ್ಥೆಯು ಸಮುದಾಯದ ಒಂದು ಭಾಗವಾಗಿದ್ದು, ಸಮುದಾಯದಿಂದ ಬೇರೆಯಾಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಜಾತಿಯ ಶ್ರೇಣಿಕೃತ ವ್ಯವಸ್ಥೆ, ಆರ್ಥಿಕ ಸ್ಥಾನಮಾನ ಮತ್ತು ಲಿಂಗ ಸಂಬಂಧಿಗಳು, ಸಾಂಸ್ಕೃತಿಕ ವೈವಿಧ್ಯತೆಗಳು ಹಾಗೂ ಭಾರತೀಯ ಸಮಾಜದ ಲಕ್ಷಣಗಳಲ್ಲಿ ಒಂದಾದ ಅಸಮತೋಲನ ಆರ್ಥಿಕ ಅಭಿವೃದ್ಧಿಯು ಶಾಲಾ ಶಿಕ್ಷಣವನ್ನು ಪಡೆದುಕೊಳ್ಳುವಲ್ಲಿ ಮತ್ತು ಶಾಲೆಯಲ್ಲಿ ಮಕ್ಕಳ ಭಾಗವಹಿಸುವಿಕೆಯ ಮೇಲೆ ತೀವ್ರವಾದ ಪ್ರಭಾವವನ್ನುಬೀರುತ್ತವೆ. ಇದು ವಿವಿಧ ಸಾಮಾಜಿಕ ಮತ್ತು ಆರ್ಥಿಕ ಗುಂಪುಗಳ ಮಕ್ಕಳು ಶಾಲಾ ನೊಂದಾವಣಿ ಮತ್ತು ಶಿಕ್ಷಣವನ್ನು ಮುಂದುವರೆಸುವಲ್ಲಿನ ಪ್ರಮಾಣದಲ್ಲಿ ಇರುವ ತೀಕ್ಷ್ಣವಾದ ವ್ಯತ್ಯಯಗಳನ್ನು ತಿಳಿಸುತ್ತದೆ. ಅಲ್ಲದೆ ಗ್ರಾಮೀಣ ಮತ್ತು ನಗರದ ಪ.ಜಾ. ಮತ್ತು ಪ.ಪಂಗಡದ ಬಡವ ಸಮುದಾಯದ ಹೆಣ್ಣುಮಕ್ಕಳು ಮತ್ತು ದುರ್ಬಲ ವರ್ಗಕ್ಕೆ ಸೇರಿದ ಧಾರ್ಮಿಕ ಸಮುದಾಯದ ಮತ್ತು ಸಾಂಸ್ಕೃತಿಕ ಅಲ್ಪಸಂಖ್ಯಾತರ ಶೈಕ್ಷಣಿಕವಾಗಿ ಶೋಚನೀಯ ಸ್ಥಿತಿಯಲ್ಲಿದ್ದಾರೆ. ನಗರ ಪ್ರದೇಶಗಳಲ್ಲಿ ಮತ್ತು ಹಲವಾರು

ಗ್ರಾಮಗಳಲ್ಲಿ ಶಾಲಾ ವ್ಯವಸ್ಥೆಯು ವಿವಿಧ ಸ್ತರಗಳಲ್ಲಿ ವಿಂಗಡಣೆಯಾಗಿದ್ದು ಮಕ್ಕಳಿಗೆ ವಿವಿಧ ರೀತಿಯ ಶೈಕ್ಷಣಿಕ ಅನುಭವಗಳನ್ನು ನೀಡುತ್ತಿದೆ. ಅಸಮಾನ ಲಿಂಗ ಸಂಬಂಧಿಗಳು ಗಂಡುಮಕ್ಕಳು ಹೆಚ್ಚಿನ ಅಧಿಕಾರ ಚಲಾಯಿಸುವುದರೊಂದಿಗೆ ಆತಂಕಗಳನ್ನು ಸೃಷ್ಟಿಸುವುದರೊಂದಿಗೆ ಗಂಡು ಮತ್ತು ಹೆಣ್ಣು ಮಕ್ಕಳ ಸ್ವಾತಂತ್ರವನ್ನು ಮೊಟಕುಗೊಳಿಸುವ ಮೂಲಕ ತಮ್ಮ ಸಂಪೂರ್ಣ ಸಾಮಾರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳವಲ್ಲಿ ತೊಡಕಾಗುತ್ತದೆ. ಹಾಗಾಗಿ ಇದೊಂದು ಎಲ್ಲಾ ಮಾನವರು ಲಿಂಗ ಅಸಮಾನತೆಯಿಂದ ಮುಕ್ತರಾಗಬೇಕೆನ್ನುವ ಆಸ್ಥೆಯನ್ನು ಹೊಂದಿದೆ.

ಪ್ರತಿಯೊಬ್ಬ ಶಾಲಾ ನಾಯಕರು ಶಿಕ್ಷಣವು ತನ್ನ ಉದ್ದೇಶಕ್ಕೆ ತಕ್ಕದಾದಂತೆ ಮತ್ತು ಸಮುದಾಯದ ಪ್ರತಿಯೊಬ್ಬರ ಅಗತ್ಯತೆಯನ್ನು ಪೂರೈಸುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಾನೆ. ಎನ್‌ಸಿಎಫ್ ಮತ್ತು ಶಿಕ್ಷಣದ ಹಕ್ಕು ವಿವರಿಸುವಂತೆ ಶಾಲೆಯು ಕಲಿಕಾ ಸಮುದಾಯವಾಗಿದ್ದು, ಶಾಲಾ ನಾಯಕರು ಶಾಲೆಯ ಸಾಮಾಜಿಕ ಹಿನ್ನೆಲೆಯನ್ನು ಅರ್ಥಮಾಡಿಕೊಂಡು ಉತ್ತಮ ಜ್ಞಾನವನ್ನು ಹೊಂದುವ ಅಗತ್ಯತೆಯಿದೆ. ಮುಂದುವರೆದು ಎನ್‌ಸಿಎಸ್‌ಎಲ್ ನ್ಯಾಷನಲ್ ಪ್ರೋಗ್ರಾಮ್ ಡಿಸೈನ್ ಮತ್ತು ಫ್ರೇಮ್‌ವರ್ಕ 2014 ವಿವರಿಸುವಂತೆ ಶಾಲಾ ನಾಯಕರುಗಳಿಗೆ ನಾಲ್ಕು ವಿಶೇಷ ಕ್ಷೇತ್ರಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಹೊಸವಿಷಯಗಳನ್ನು ಹುಡಕಲುಅವಕಾಶವನ್ನು ಕಲ್ಪಿಸುತ್ತದೆ. ಅವುಗಳೆಂದರೆ ಆದಿವಾಸಿಗಳು, ಸಣ್ಣ ಪ್ರಮಾಣದ ಶಾಲೆಗಳು, ಸಂಘರ್ಷದಲ್ಲಿರುವ ಪ್ರದೇಶಗಳಲ್ಲಿ ಮತ್ತು ಸಂಕಷ್ಟದಲ್ಲಿರುವ ಭೌಗೋಳಿಕ ಸನ್ನಿವೇಶಗಳಲ್ಲಿರುವ ಶಾಲೆಗಳು.

**ವಿಡಿಯೋ:** ಶಾಲಾ ನಾಯಕತ್ವ –ಅಂತರ್ಗತಗೊಳಿಸುವಿಕೆ

## ಚಟುವಟಿಕೆ 1: ನಿಮ್ಮ ಶಾಲೆಯಲ್ಲಿರುವ ವಿಭಿನ್ನತೆಗಳು

ಕಳೆದ ಒಂದು ವಾರದಲ್ಲಿ ನಿಮಗೆ ಶಾಲಾ ವಾತಾವರಣದಲ್ಲಿರುವ ವಿಭಿನ್ನತೆ/ ವ್ಯತ್ಯಯಗಳಿಂದಾಗಿ ನೀವು ಎದುರಿಸಬೇಕಾದ ಸವಾಲುಗಳನ್ನು ಐದು ವಾಕ್ಯಗಳಲ್ಲ ನಿಮ್ಮ ಕಲಿಕಾ ಡೈರಿಯಲ್ಲಿ ಬರೆದಿಡಿ. ಉದಾ: ಶಾಲೆಯಲ್ಲಿ ಮಾತಾನಾಡಿದ ಹಲವಾರು ವಿವಿಧ ಭಾಷೆಗಳು, ಬಾಲಕಿಯರಿಗಿಂತ ಬಾಲಕರಿಗೆ ಹೆಚ್ಚು ಆದ್ಯತೆ ನೀಡಿದ್ದರ ಬಗ್ಗೆ, ವಿದ್ಯಾರ್ಥಿಗಳ ವಿಭಿನ್ನ ಧಾರ್ಮಿಕ ಆಚರಣೆಗಳು ಅಥವಾ ವೀಲ್ಚೆರ್‌ನಲ್ಲಿರುವ ವಿದ್ಯಾರ್ಥಿಗೆ ನೀಡಿದ ಸಹಕಾರ

ಪಿಠೀಕೆಯಲ್ಲಿ ಪ್ರಸ್ತಾಪಿಸಿರುವ ವಿಭಿನ್ನತೆಗಳನ್ನು ಉಲ್ಲೇಖಿಸಿ ಬರೆಯುವುದು ನಿಮಗೆ ಸಹಾಯವಾಗಬಹುದು; ಜನಾಂಗ, ಬಣ್ಣ, ಭಾಷೆ, ಧರ್ಮ, ಜಾತಿ, ಸಮುದಾಯ, ನಂಬಿಕೆಗಳು, ಸಮುದಾಯ, ಸಾಮಾಜಿಕ ಗುಂಪುಗಳು, ಆರ್ಥಿಕ ಸ್ಥಾನಮಾನ, ಸಾಕ್ಷರತೆಯ ಮಟ್ಟ, ಸಾಮರ್ಥ್ಯದ ಮಟ್ಟ, ಆರೋಗ್ಯದ ಹಂತಗಳು, ವೃತ್ತಿಗಳು, ಭೌಗೋಳಿಕ ಪ್ರಾಂತ್ಯಗಳು, ಹವಾಮಾನ ಮತ್ತು ರಾಜಕೀಯ ಪ್ರೇರೇಪಣೆಗಳು.

ನೀವು ಈ ವ್ಯತ್ಯಾಸಗಳನ್ನು ಗುರುತಿಸಲು ಸದಾ ಜಾಗೃತರಾಗಿರಬೇಕು. ಈ ಹಂತದಲ್ಲಿ, ಈ ವಿಭಿನ್ನತೆ/ ವ್ಯತ್ಯಯಗಳು ನಿಜವಾಗಲು ಸಮಸ್ಯೆಯೇ ಅಥವಾ ಅಲ್ಲವೆ ಎಂದು ಆಲೋಚಿಸುವ ಅಗತ್ಯತೆಯಿಲ್ಲ. ನೀವು ವ್ಯತ್ಯಾಸ ಎಲ್ಲಿದೆಯೆಂದು ಮಾತ್ರ ಗುರುತಿಸಿದರೆ ಸಾಕು ಅಂದರೆ ವರ್ತನೆ, ತೋರ್ಪಡಿಸುವಿಕೆಯಲ್ಲಿ, ಸಾಮಾರ್ಥ್ಯ,ಅವಕಾಶಗಳು ಅಥವಾ ಬದ್ಧತೆಯಲ್ಲಿದೆಯೇ ಎಂದು ಗಮನಿಸಬೇಕು.

### ಚರ್ಚೆ

ಇದೊಂದು ತೀರಾ ವೈಯಕ್ತಿಕವಾದ ಸ್ಪಂದನೆಯಾಗಿರುತ್ತದೆ. ಬೇರೆಯವರು ಏನು ಹೇಳುತ್ತಾರೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ವಿಭಿನ್ನತೆ/ ವ್ಯತ್ಯಯಗಳು ಯಾವುದಿರಬೇಕೆಂಬುದರ ಬಗ್ಗೆ ಜಾಗೃತರಾಗಿರಬೇಕು ಮತ್ತು ಅದೇ ಚಟುವಟಿಕೆಯನ್ನು ಮಾಡಲು ನಿಮಗೊಬ್ಬ ಸಹದ್ಯೋಗಿ ಸಿಗಬಹುದು ಮತ್ತು ಅವರ ಟಿಪ್ಪಣಿಗಳೊಂದಿಗೆ ಹೋಲಿಕೆ ಮಾಡಿಕೊಳ್ಳುವುದು ಹೆಚ್ಚು ಆಸಕ್ತಿಯನ್ನು ತರುವಂತಾಹದ್ದಾಗಿರಬಹುದು.

ಈ ವಿಭಿನ್ನತೆ/ ವ್ಯತ್ಯಯಗಳಿಗೆ ಹಲವಾರು ಆಯಾಮಗಳಿರುತ್ತವೆ ಮತ್ತು ಪ್ರತಿಯೊಂದು ಶಾಲಾ ಸಮುದಾಯವು ಹಲವಾರು ಅಂಶಗಳಿಂದ ಪ್ರಭಾವಿತವಾಗಿರುತ್ತವೆ. ಶಾಲಾನಾಯಕರು ಅವುಗಳನ್ನು;

- ತಮ್ಮ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಲ್ಲಿವ ಆ ವಿಭಿನ್ನತೆ/ ವ್ಯತ್ಯಯಗಳನ್ನು ಗುರುತಿಸಬೇಕು
- ಆ ತಾರತಮ್ಯತೆಗಳನ್ನು ನಿವಾರಿಸಲು ಕ್ರಿಯಾಶೀಲರಾಗಿ
- ಈ ಆ ವಿಭಿನ್ನತೆ/ ವ್ಯತ್ಯಯಗಳನ್ನು ಸಕಾರಾತ್ಮಕವಾಗಿ ಹೆಚ್ಚಿನದನ್ನು ಪಡೆದುಕೊಳ್ಳಲು ಬಳಸಿಕೊಳ್ಳಿ ಅದು ಸಾಮಾಜಿಕವಾಗಿ

(ಸಮುದಾಯ ಮತ್ತು ರಾಷ್ಟ್ರದ ವ್ಯಾಪಕವಾದ ಬಳಕೆಗಾಗಿ) ಮತ್ತು ಶೈಕ್ಷಣಿಕವಾಗಿ ( ಎಲ್ಲಾ ವಿದ್ಯಾರ್ಥಿಗಳು ತಮ್ಮ ಸಾಮಾರ್ಥ್ಯವನ್ನು ಬಳಸಿಕೊಳ್ಳುತ್ತಿದ್ದಾರೆಂದು ಖಚಿತಪಡಿಸಿಕೊಳ್ಳಲು)

## ಚಟುವಟಿಕೆ 2: ಕಾರ್ಯ ಸಾಧನೆಗಾಗಿ ಮತ್ತು ಗುರಿ ತಲುಪಿವಿಕೆಗಾಗಿ ಸಂದರ್ಭವನ್ನು ಅರ್ಥಮಾಡಿಕೊಳ್ಳುವುದು

ನಿಮ್ಮ ಶಾಲೆಯ ವಿದ್ಯಾರ್ಥಿಗಳ ವಿಭಿನ್ನತೆಗಳ ಸಾಮಾಜಿಕ ಸನ್ನಿವೇಶಗಳು ಹೇಗೆ ನೊಂದಾವಣಿ, ಕಲಿಕೆ ಮತ್ತು ಸಾಧನೆಗಳ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಪ್ರತಿಬಿಂಬಿಸಿ. ಯಾವ ರೀತಿಯ ಶೈಲಿಗಳು ಮತ್ತು ಮಾದರಿಗಳನ್ನು ನೀವು ಗಮನಿಸಿದ್ದೀರಾ? ನಿಮ್ಮ ಸನ್ನಿವೇಶದಲ್ಲಿ ಯಾವ ರೀತಿಯ ವಿಭಿನ್ನತೆಯ ಪ್ರಮುಖ ಅಂಶಗಳನ್ನು ಉದ್ದೇಶಿಸಿ ಕಾರ್ಯನಿರ್ವಹಿಸಲಿದ್ದೀರಿ?

ಕೆಳಗೆ ಕೊಟ್ಟಿರುವ ಪ್ರಶ್ನೆಗಳು ನಿಮ್ಮ ವಿದ್ಯಾರ್ಥಿಗಳ ಸಾಮಾಜಿಕ ಸನ್ನಿವೇಶಕ್ಕೆ ಸರಿಹೊಂದುತ್ತವೆ ಮತ್ತು ಹೇಗೆ ಕಲಿಕೆಯು ಮತ್ತು ಆಕಾಂಕ್ಷೆಗಳ ಮೇಲೆ ಪರಿಣಾಬೀರುತ್ತವೆ? ನಿಮ್ಮ ಉತ್ತರಗಳನ್ನು ನಿಮ್ಮ ಕಲಿಕೆಯ ಡೈರಿಯಲ್ಲಿ ಟಿಪ್ಪಣಿಯಾಗಿ ಬರೆಡಿಟ್ಟಿಕೊಳ್ಳಿ. ನಿರ್ದಿಷ್ಟವಾಗಿ ನಿಮ್ಮ ಸಂದರ್ಭಕ್ಕೆ ಹೋಲುವಂತಹ ವಿಭಿನ್ನ ಪ್ರಶ್ನೆಗಳನ್ನು ನೀವು ಕೈಬಿಡಬಹುದು ಅಥವಾ ಸೇರಿಸಬಹುದು. ನೀವು ನಿಮ್ಮನ್ನೇ ಹೀಗೆ ಪ್ರಶ್ನೆಗಳನ್ನು ಕೇಳಿಕೊಳ್ಳಬಹುದು;

- ನಿಮ್ಮ ವಿದ್ಯಾರ್ಥಿಗಳಲ್ಲಿ ಯಾರಾದರೂ ಉನ್ನತ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳುವರೇ? ತಮ್ಮ ಆಯ್ಕೆಯ ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಸೀಟುಗಳನ್ನು ಪಡೆದುಕೊಂಡಿದ್ದಾರೆ? ಈ ಯಶಸ್ವೀ ವಿದ್ಯಾರ್ಥಿಗಳು ಯಾರು?
- ಯಾವ ಸಾಮರ್ಥ್ಯವಿಲ್ಲದಿರುವುದು ಈ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಹೋಗಲು ತೊಡಕಾಗಿದೆ?ಏಕೆ?
- ಯಾವ ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣವನ್ನು ಮುಗಿಸಲು ಕೇಂದ್ರೀಕರಿಸಿದ್ದಾರೆ? ಪ್ರಾಥಮಿಕ ಶಿಕ್ಷಣದ ನಂತರದಲ್ಲಿನ ಶಿಕ್ಷಣದ ಬಗ್ಗೆ ಅಸ್ಪಷ್ಟತೆಯನ್ನು ಹೊಂದಿದ್ದಾರೆ?
- ನಿಮ್ಮ ಶಾಲೆಯಲ್ಲಿನ ಎಷ್ಟು ಬಾಲಕಿಯರು ದೀರ್ಘಾವಧಿಯವರೆಗೆ ಶಿಕ್ಷಣ ಪಡೆದುಕೊಳ್ಳುವ ವೃತ್ತಿಪರರಾಗುವ ಆಲೋಚನೆಯನ್ನು ಹೊಂದಿದ್ದಾರೆ?
- ತಮ್ಮ ಈಗಿನ ಸಾಮಾಜಿಕ ಸ್ಥಿತಿಗಿಂತಲೂ ಉನ್ನತವಾದ ಬದುಕನ್ನು ರೂಪಿಸಿಕೊಳ್ಳುವ ಆಕಾಂಕ್ಷೆಯನ್ನು ಎಷ್ಟರಮಟ್ಟಿಗೆ ಹೊಂದಿದ್ದಾರೆ? ಈ ವಿದ್ಯಾರ್ಥಿಗಳು ಯಾರು ಮತ್ತು ಇತರರಿಗೆ ಇಂತಹ ಆಕಾಂಕ್ಷೆಗಳು ಇಲ್ಲದಿರುವಾಗ ಇವರಿಗೆ ಮಾತ್ರ ಇಂತಹ ಆಕಾಂಕ್ಷೆಗಳಿವೆ?
- ಶಾಲೆಯಲ್ಲಿನ ಕಳಪೆ ಹಾಜರಾತಿಯ ಅವರಿಗಿರುವ ತೀರಾ ಕಡಿಮೆ ಆಕಾಂಕ್ಷೆಗಳಿಗೂ ಎಂತಹ ಸಂಬಂಧವಿದೆ? ಈ ಕಾರಣಗಳು ಒಂದಕ್ಕೊಂದು ಪೂರಕವಾಗಿಯೇ ಅಥವಾ ಕಳಪೆ ಹಾಜರಾತಿಯಿದ್ದಾಗ್ಯೂ ಕಲಿಕೆಯಲ್ಲಿ ಆಸಕ್ತಿವಹಿಸುವ ವಿದ್ಯಾರ್ಥಿಗಳು ಇದ್ದಾರೆಯೇ?
- ವಿದ್ಯಾರ್ಥಿಗಳ ಭಾಷಾ ಕೌಶಲ್ಯಗಳು ಅವರ ಕಲಿಕೆಯ ಮತ್ತು ದೀರ್ಘಾವಧಿಯ ಆಕಾಂಕ್ಷೆಗಳ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು?

### ಚರ್ಚೆ:

ನಿಮ್ಮ ಪ್ರಶ್ನೆಗಳು ನಿಮಗೆ ಅಚ್ಚರಿಯನ್ನು ತಂದಿವೆಯೇ? ನೀವು ಸ್ಪಂದಿಸುತ್ತಿರುವುದು ನಿಮ್ಮ ಮನಸ್ಸು ಗಟ್ಟಿಯಾಗಿ ಹೇಳುವುದು ಆಧರಿಸಿ ಅಥವಾ ಸಾಮಾನ್ಯ ಗಮನಿಸುವಿಕೆಯನ್ನು ಆಧರಿಸಿರಬಹುದು ಎನ್ನುವುದನ್ನು ಗುರುತಿಸಿದ್ದೀರೆ? ನೀವು ಗುರುತಿಸಿರುವ ಸಮಸ್ಯೆಯನ್ನು ನೀವು ನಿಖರವಾಗಿ ಹೇಳಲು ನಿಮಗೆ ಇನ್ನಷ್ಟು ಸಾಕ್ಷ್ಯಾಧಾರಗಳು ಮತ್ತು ಕಚ್ಚಾ ಅಂಕಿ-ಅಂಶಗಳ ಅಗತ್ಯತೆಯಿದೆಂಬದನ್ನು ನೀವು ಈಗಾಗಲೇ ಮನಗಂಡಿರಬಹುದು. ನೀವು ಕ್ರಿಯಾಶೀಲರಾಗುವ ಮೊದಲು, ನೀವು ಸಮಸ್ಯೆಯನ್ನು ನಿಖರವಾಗಿ ಗುರುತಿಸಿದ್ದೀರಾ ಮತ್ತು ಇದು ಶಾಲಾ ಸಮುದಾಯದಲ್ಲಿ ಯಾವ ಹಂತದವರೆಗೆ ಪ್ರಚಲಿತದಲ್ಲಿದೆ ಎಂಬುದನ್ನು ಪರೀಕ್ಷಿಸಿ. ಅದರಷ್ಟೇ ಮತ್ತೊಂದು

ಮುಖ್ಯವಾದ ವಿಷಯ ಶಿಕ್ಷಕರು, ವಿದ್ಯಾರ್ಥಿಗಳು, ಸ್ಥಳೀಯ ಸಮುದಾಯದ ಸದಸ್ಯರು, ಶಾಲಾ ನಿರ್ವಹಣಾ ಸಮಿತಿ ಮತ್ತು

ಪೋಷಕರ ಹಲವಾರು ವಿಷಯಗಳ ಬಗ್ಗೆ ಅವರಿಗಿರುವ ನಂಬಿಕೆಗಳು ಮತ್ತು ನಡವಳಿಕೆಗಳನ್ನು ಅರ್ಥಮಾಡಿಕೊಳ್ಳಬೇಕು.

ಇದು ಆಗಬೇಕಾದರೆ, ನಿಮ್ಮ ಪ್ರಾಥಮಿಕ ಪ್ರತಿಕ್ರಿಯೆಗಳನ್ನು ಬೆಂಬಲಿಸಿಕೊಳ್ಳಲು ಮತ್ತು ಮಾಡಬೇಕಿರುವ ಬದಲಾವಣೆಗಳನ್ನು ಸಮರ್ಥಿಸಿಕೊಳ್ಳಲು ಅಂಕಿ-ಅಂಶಗಳನು ಸಂಗ್ರಹಿಸಬೇಕು. ಈ ರೀತಿಯ ಅಂಕಿ-ಅಂಶಗಳ ಸಂಗ್ರಹಣೆ ಮೌಲ್ಯ ಮಾಪನಕ್ಕೆ ಅಥವಾ ಕಲಿಕೆಯ ಪರಿಣಾಮಗಳನ್ನು ಅಳೆಯಲು ಅಡಿಪಾಯವಾಗುತ್ತವೆ.

## ಚಟುವಟಿಕೆ 3: ಶಾಲೆಯೊಳಗೆ ವಿಭಿನ್ನತೆಯ ನಕ್ಷೆಯ ತಯಾರಿ

ವಿದ್ಯಾರ್ಥಿಗಳು ಹಲವಾರು ರೀತಿಯ ಅನುಭವಗಳು ಮತ್ತು ಸಂಪನ್ಮೂಲಗಳೊಂದಿಗೆ ಶಾಲೆಗೆ ನೊಂದಾವಣಿಯಾಗಿರುತ್ತಾರೆ. ಇವುಗಳು ಸ್ವಾಭಾವಿಕವಾಗಿಯೇ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವರ ಕಲಿಕೆಯ ಫಲಿತಾಂಶಗಳ ಮೇಲೆ ಪರಿಣಾಮಬೀರುತ್ತವೆ, ಮತ್ತು ನೀವು ಇದನ್ನು ಆರಂಭಿಕವಾಗಿ ನಿಮ್ಮ ಶಾಲೆಯಲ್ಲಿ ವಾಸ್ತವಿಕವಾಗಿರುವ ವಿಭಿನ್ನತೆಗಳ 'ನಕ್ಷೆಯನ್ನು ತಯಾರಿಸಬೇಕು.



**ಚಿತ್ರ 2 ವಿಭಿನ್ನತೆಯ ನಕ್ಷೆಯ ತಯಾರಿ**

ಕೆಳಗೆ ನೀಡಿರುವಂತಹ ಪಟ್ಟಿಯಂತಹ ಪಟ್ಟಿ-1ರಲ್ಲಿ ತೋರಿಸಿರುವಂತೆ ನಿಮಗೆ ಈಗಾಗಲೇ ಲಭ್ಯವಿರುವ ಅಂಕಿ-ಅಂಶಗಳನ್ನು ಆಧರಿಸಿ ಮಾಹಿತಿಯನ್ನು ತುಂಬುವುದನ್ನು ಸಂಪೂರ್ಣಗೊಳಿಸಿ. ನಿಮ್ಮ ಎಡಗಡೆಯ ಕಾಲಂನಲ್ಲಿ ನಿಮ್ಮ ವಿದ್ಯಾರ್ಥಿಗಳ ಕಲಿಕೆಯಲ್ಲಿ ಭಾಗವಹಿಸುವಕೆಯ ಮೇಲೆ ಪರಿಣಾಮ ಬೀರುವ ಅಂಶಗಳನ್ನು ನೀಡಲಾಗಿದೆ. ನಿಮ್ಮ ವಿದ್ಯಾರ್ಥಿಗಳು ತಾವು ಪ್ರತಿನಿಧಿಸುವ ಧರ್ಮ ಮತ್ತು ಭಾಷೆಗಳಿಗೆ ವಿಷಯಗಳನ್ನು ಉಪಗುಂಪುಗಳಾಗಿ ವರ್ಗೀಕರಿಸಬೇಕಾಗಬಹುದು.

ಈ ಪ್ರತಿಯೊಂದು ಅಂಶಗಳು ನಿಮ್ಮ ಶಾಲಾ ಸಮುದಾಯದ ಮೇಲೆ ಹೇಗೆ ಪ್ರಭಾವಬೀರುತ್ತವೆಂಬುದನ್ನು ಆಲೋಚಿಸಿ ಮತ್ತು ಕಾಲಂಗಳನ್ನು ಭರ್ತಿ ಮಾಡಿ. ನಿಮ್ಮಲ್ಲಿ ಎಲ್ಲಾ ವರ್ಗೀಕರಣಗಳಿಗೂ ಅಂಕಿ-ಅಂಶಗಳು ಲಭ್ಯವಿಲ್ಲದಿರಬಹುದು. ನಿಮ್ಮ ಕಲಿಕಾ ಡೈರಿಯಲ್ಲಿ ಅಂಕಿ-ಅಂಶಗಳಲ್ಲಿ ಎಲ್ಲೆಲ್ಲಿ ಕೊರತೆಗಳಿವೆ ಎಂಬುದನ್ನು ಟಿಪ್ಪಣಿ ಮಾಡಿಕೊಳ್ಳಿ ಮತ್ತು ಎಲ್ಲೆಲ್ಲಿ ಸಾಧ್ಯವೂ ಅಲ್ಲಲ್ಲಿ ಅಂದಾಜು ಮಾಡಲು ಪ್ರಯತ್ನಿಸಿ, ನೀವು ಎಲ್ಲೆಲ್ಲಿ ಊಹೆಗಳನ್ನು ಮಾಡಿದ್ದೀರೋ, ಅಲ್ಲಿ ಜಾಗೂರುಕರಾಗಿರಿ ಮತ್ತು ಮುಂದುವರೆದು ವಿಚಾರಣೆ ಮಾಡದೆ ಪರಿಸಮಾಪ್ತಿಗೊಳಿಸಬೇಡಿ.

**ಪಟ್ಟಿ- 1 ನಿಮ್ಮ ಶಾಲೆಯಲ್ಲಿನ ವಿಭಿನ್ನತೆಗಳ ನಕ್ಷೆಯ ತಯಾರಿ**

| ಅಂಶಗಳು | ಅಂಕಿ-ಅಂಶಗಳು | ಕಲಿಕೆಯ ಫಲಿತಾಂಶಗಳ ಮೇಲೆ ಪ್ರಭಾವ ಬೀರುವ ಅಂಶಗಳು ಅಥವಾ ಊಹೆಗಳು |
|---|---|---|
| ಅನುಪಾತ: ಹೆಣ್ಣು-ಗಂಡು | | |
| ಕೆಳಮಟ್ಟದ ಸಾಮಾಜಿಕ - ಆರ್ಥಿಕತೆ | | |

| | | |
|---|---|---|
| ಉನ್ನತ ಮಟ್ಟದ ಸಾಮಾಜಿಕ – ಆರ್ಥಿಕತೆ | | |
| ಮನೆಯಲ್ಲಿ ಮಾತನಾಡುವ ಭಾಷೆ | | |
| ಬಳಕೆಯಲ್ಲಿರುವ ಭಾಷೆಯಲ್ಲಿ ಸಂಖ್ಯೆಗಳನ್ನು ಹೇಳಿಕೊಡುವುದು | | |
| ಕಲಿಕೆಯಲ್ಲಿ ನಿಧಾನ | | |
| ದೈಹಿಕ ಅಂಗವಿಕಲತೆ | | |
| ಶಾಲೆಗೆ ತಲುಪಲು ಪ್ರಯಾಣಿಸುವ ದೂರ | | |
| ಅನುಸರಿಸುತ್ತಿರುವ ಧರ್ಮ | | |
| ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳು | | |
| ಇತರೆ | | |

ನಿಮ್ಮ ಕಲಿಕಾ ಡೈರಿಯಲ್ಲಿ ಮೇಲೆ ಹೇಳಿರುವ ಪಟ್ಟಿಯಲ್ಲಿನ ಅಂಶಗಳಿಂದಾಗಿ ನಿಮ್ಮಲ್ಲಿ ಉಂಟಾದ ಆಶ್ಚರ್ಯಗಳು ಅಥವಾ ಯೋಚನೆಗಳನ್ನು ಮತ್ತು ನಿಮ್ಮ ಮನಸ್ಸಿನಲ್ಲಿ ಮೂಡಿದ ಪ್ರಶ್ನೆಗಳನ್ನು ಬರೆದಿಟ್ಟುಕೊಳ್ಳಿ.

**ಚರ್ಚೆ**

ಈ ಚಟುವಟಿಕೆ ನಿಮ್ಮ ಶಾಲೆಯ ಪರಿಸರದ ಬಗ್ಗೆ ನೀವು ಅರಿತುಕೊಂಡಿರುವುದರ ಬಗ್ಗೆ ಬೆಳಕು ಚೆಲ್ಲುತ್ತದೆ ಮತ್ತು ಇನ್ನಿತರ ಮಾಹಿತಿಗಳನ್ನು ಕಲೆ ಹಾಕಲು ಕುತೂಹಲವನ್ನು ಉಂಟುಮಾಡಿರಬಹುದು. ನೀವು ಇದುವರೆಗೂ ಪರಿಗಣಿಸದೆ ಇರುವ ಇತರ ವಿಭಿನ್ನತೆಗಳನ್ನು ನೀವು ಗಮನಿಸಬಹುದು, ಅಥವಾ ನೀವು ಕಲ್ಪಿಸಿಕೊಂಡಿರಬಹುದು. ನಿಮ್ಮ ಶಾಲಾ ಸಮುದಾಯದಲ್ಲಿಇನ್ನತರ ಹಲವಾರು ಅಂಶಗಳಿರುವುದು ನಿಮ್ಮ ಅರಿವಿಗೆ ಬರಬಹುದು ಮತ್ತು ಅವುಗಳನ್ನು ಪ್ರಮುಖ ಅಂಶಗಳೆಂದು ನೋಡಬೇಕೆಂದು ನಿಮಗೆ ಅನ್ನಿಸುತ್ತದೆ ಮತ್ತು ಅಂಕಿ–ಅಂಶಗಳನ್ನು ಒಟ್ಟುಗೂಡಿಸಬೇಕೆಂದು ಅನ್ನಿಸುತ್ತದೆ.

ಖಂಡಿತವಾಗಿಯೂ ನಿಮಗೆ ತಿಳಿಯದೆ ಇರುವುದು ಸಾಕಷ್ಟಿದೆ ಎಂದು ಬಹುಶ: ನಿಮಗೆ ಅನ್ನಿಸಬಹುದು, ಆದರೆ ಇವುಗಳ ಅಂಕಿ–ಅಂಶಗಳನ್ನು ಪಡೆದುಕೊಳ್ಳುವುದು ಹೇಗೆಂದು ಆತಂಕವೂ ಆಗಬಹುದು. ಇದು ಸ್ವಾಭಾವಿಕ, ವಿಶೇಷವಾಗಿ ಇದೊಂದು ಹೊಚ್ಚ ಹೊಸದುಮತ್ತು ಈ ಮಾಹಿತಿಯನ್ನು ಬಳಸಿಕೊಳ್ಳಲು ನಿಮಗಿರುವ ಸಾಮರ್ಥ್ಯದ ಬಗ್ಗೆ ಯೋಚನೆಯೂ ಬರಬಹುದು. ಇದರೊಂದಿಗೆ ಮುನ್ನೆಡೆದರೆ ನಿಮ್ಮ ಆತ್ಮ ವಿಶ್ವಾಸ ಹೆಚ್ಚಾಗುತ್ತದೆ. ನಿಮ್ಮ ಉದ್ದೇಶದ ಬಗ್ಗೆಯೇ ನಿಮ್ಮ ಗಮನ ಕೇಂದ್ರಿಕೃತವಾಗಿರಲಿ; ನಿಮ್ಮ ಪ್ರತಿಯೊಂದು ವಿದ್ಯಾರ್ಥಿಯ ಜೀವನದಲ್ಲಿ ಬದಲಾವಣೆ ತರಲು ಅವಕಾಶವಾಗಿರುತ್ತದೆ.

ಇಲ್ಲೊಂದು ಕೇಸ್ ಸ್ಟಡಿಯನ್ನು ನಿಮಗೆ ಓದಲು ಮತ್ತು ಅದರ ಬಗ್ಗೆ ಪ್ರತಿಕ್ರಿಯಿಸಲು ಕೊಡಲಾಗಿದೆ, ಶಾಲಾ ನಾಯಕರೊಬ್ಬರು ತಮ್ಮ ಶಾಲೆಯಲ್ಲಿನ ವಿದ್ಯಾರ್ಥಿನಿಯರ ಸಾಧನೆಗಳಲ್ಲಿ ವ್ಯತ್ಯಾಸಗಳನ್ನು ಕಂಡುಕೊಳ್ಳಲು ತಮ್ಮ ಶಾಲೆಯ ಬಗ್ಗೆ ಕಲೆಹಾಕಿದ ಮಾಹಿತಿಗಳನ್ನು ಹೇಗೆ ಬಳಸಿಕೊಂಡಳು ಎಂಬುದರ ಬಗ್ಗೆ ವಿಶೇಷವಾಗಿ ಗಮನಹರಿಸಬೇಕು. ಇದೊಂದು ಅತ್ಯುನ್ನತವಾಗಿ ಗೌರವಿಸಲ್ಪಡುವ ಶಾಲಾ ನಾಯಕರಾಗಿದ್ದು ಶಾಲೆಯು ಕುಶಲ ಕರ್ಮಿಗಳ ಸಮುದಾಯದವಿರುವ ಸ್ಥಳದಲ್ಲಿದ್ದುದಾಗಿದ್ದು ಆ ಜ್ಞಾನವನ್ನು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ಹೇಗೆ ಬಳಸಿಕೊಂಡಳು ಎಂಬುದರ ಬಗೆ

## ಕೇಸ್ ಸ್ಟಡಿ–1 ಶ್ರೀಮತಿ ಕುಮಾರ್ ಹಿಂದಿರುಗಿದರು

*ಕೇಸ್ ಸ್ಟಡಿಯಲ್ಲಿ ಕೊಡಲಾಗಿರುವ ವಿಷಯಗಳನ್ನು ಶಿಕ್ಷಣ ಅಧಿಕಾರಿಯೊಬ್ಬರು ತಮ್ಮಸಹದ್ಯೋಗಿಯೊಬ್ಬರಿಗೆ ಬರೆದ ಪತ್ರದಿಂದ ತೆಗೆದುಕೊಂಡಿರುವುದು.*

ಶ್ರೀಮತಿ ಕುಮಾರ್‌ಗೆ ತಮ್ಮ ಶಾಲೆಯ ಪ್ರತಿಯೊಂದು ವಿದ್ಯಾರ್ಥಿಯ ಬಗ್ಗೆ ತಿಳಿದುಕೊಂಡಿದ್ದು, ಯಾರಿಗೆ ಆಕೆ ಬೆಂಬಲವನ್ನು ಕೊಡಬೇಕು ಮತ್ತು ತಮ್ಮ

ಸಂಪೂರ್ಣ ಸಾಮಾರ್ಥ್ಯವನ್ನು ಕಲಿಕೆಗಾಗಿ ಬಳಸಿಕೊಳ್ಳುತ್ತಿರುವುದರ ಬಗ್ಗೆ ಹೇಗೆ ಖಚಿತಪಡಿಸಿಕೊಳ್ಳುವುದು ಎಂಬುದು ತಿಳಿದಿತ್ತು. ತಮ್ಮ ವಿದ್ಯಾರ್ಥಿಗಳ ಸಾ ಬಗ್ಗೆ ಗಮನವಿಟ್ಟಿದ್ದ ಶ್ರೀಮತಿ ಕುಮಾರಿಗೆ ತಮ್ಮ ಶಾಲೆಯಲ್ಲಿ ಕೆಳಮಟ್ಟದ ಸಾಮಾಜಿಕಮತ್ತು ಆರ್ಥಿಕ ಹಿನ್ನೆಲೆಯಿಂದ ಬಂದಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಫಲಿತಾಂಶಗಳು ಕೂಡ ಕೆಳಮಟ್ಟದಲ್ಲಿರುತ್ತದೆ ಎಂಬುದನ್ನು ಕೂಡ ಆಕೆ ಅರಿತುಕೊಂಡಿದ್ದರು. ಹಾಗಾಗಿಯೇ ಆಕೆಯು ತಮ್ಮ ವಿದ್ಯಾರ್ಥಿಗಳ ಗುರಿಗಳನ್ನು ಮ ಸಾಧನೆಗಳನ್ನು ತಲುಪಲು ಇರುವ ಅಗತ್ಯತೆಗಳನ್ನು ಆದ್ಯತೆ ಮೇರೆಗೆ ಪೂರೈಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಳು.

ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಜನ್ಮ ದಿನದ ಆಚರಣೆಗೆ ಹಣವನ್ನು ಖರ್ಚು ಮಾಡುವುದರಬದಲು ಅದನ್ನು ಅವರ ಶಿಕ್ಷಣಕ್ಕಾಗಿ ಖರ್ಚು ಮಾಡಲ ಶಾಲಾನಿರ್ವಹಣಾ ಸಮಿತಿಯ ಸದಸ್ಯರ ಮನವೊಲಿಸಿದಳು. ಆಕೆ ತನ್ನ ಸಹದ್ಯೋಗಿಗಳಿಗೆ ಪ್ರತಿ ಚಳಿಗಾಲದಲ್ಲಿ ಐದು ಸ್ವೆಟರ್ಗಳನ್ನು ಯಾರಿಗೆ ಕೊಳ್ಳುವ ಸಾಮರ್ಥಯವಿಲ್ಲದ ವಿದ್ಯಾರ್ಥಿನಿಯರಿಗೆ ಕೊಡುವಂತೆಯೂ ಮನವೊಲಿಸಿದಳು. ಅಲ್ಲದ ತಮ್ಮ ಕುಟುಂಬದ ಸಮಾರಂಭಗಳಿಗೆ ವಿದ್ಯಾರ್ಥಿಗಳನ್ನು ಅಹ್ವಾನಿಸು ಕೂಡ ಮಾಡಿದಳು, ಅಲ್ಲಿ ವಿದ್ಯಾರ್ಥಿಗಳಲ್ಲಿದ್ದ ಸಹಜವಾಗಿ ಬಂದಿದ್ದ ಪ್ರತಿಭೆಯಾದ ಮೆಹಂದಿಯ ವಿನ್ಯಾಸಗಳನ್ನು ಅವರ ಕೈಗಳ ಮೇಲೆ ಬಿಡಿಸುವುದರಿಂದ ಅಗತ್ಯ ಖರ್ಚುಗಳಿಗೆ ಹಣವನ್ನು ಸಂಪಾದಿಸುವಂತೆ ಕೂಡ ಮಾಡಿದಳು.

ಇತ್ತೀಚೆಗೆ ಆಕೆಯ ಸಹದ್ಯೋಗಿಗಳು ತಮ್ಮ ಶಾಲೆಯ ಛಾವಣಿಯ ಮೇಲೆ ಉಪಗ್ರಹ ಡಿಷ್ನನ್ನು ಹಾಕುವಂತೆ ಶಿಕ್ಷಕರು ಸ್ಥಳೀಯ ಶಿಕ್ಷಣ ಅಧಿಕಾರಿಗಳ ಮನವೊಲಿಸಿದರು ಏಕೆಂದರೆ ವಿದ್ಯಾರ್ಥಿಗಳ ಕುಟುಂಬಗಳು ಬೇರೆ ನಗರದಲ್ಲಿರುವ ಉಪಗ್ರಹ ವರ್ಗಾವಣೆ ಕೇಂದ್ರಕ್ಕೆ ತಮ್ಮ ಮಕ್ಕಳನ್ನು ಕಳುಹಿಸಲು ನಿರಾಕರಿಸುತ್ತಿದ್ದರು. ದ್ರಶ್ಯ ಮತ್ತು ಶ್ರಾವ್ಯ ಮಾಧ್ಯಮಗಳ ಮೂಲಕ ನೀಡುವ ಶಿಕ್ಷಣವೂ ತಮ್ಮ ಸಾಂಸ್ಕೃತಿಕ ರೀತಿನೀತಿಗಳ ಮೇಲೆ ಪರಿಣಾಮಬೀರುವುದು ಅ ಇಷ್ಟವಿರಲಿಲ್ಲ. ಆದರೆ ಈಗ ಈ ಶಿಕ್ಷಣವೂ ಅವರ ಶಾಲೆಯಲ್ಲೇ ಸಿಗುವಂತಾಗಿದೆ.

ಇಂದು ಆಕೆಯ ಹಳೆಯ ವಿದ್ಯಾರ್ಥಿಗಳು ನಗರದಲ್ಲಿನ ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ. ಕೆಲವರು ಗಂಡು ಮತ್ತು ಹೆಣ್ಣುಮಕ್ಕಳಿಬ್ಬರೂ ಇರುವ ಕಾಲೇಜುಗ ಓದುತ್ತಿದ್ದಾರೆ. ಆಕೆಯು ತನ್ನ ವಿದ್ಯಾರ್ಥಿಗಳೆಲ್ಲರೂ ಶಿಕ್ಷಕರಿಂದ ಬೆಂಬಲ ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುತ್ತಾಳೆ ಮತ್ತು ಅವರಲ್ಲಿರುವ ವಿಶೇಷವಾದ ಪ್ರತಿಭೆಗಳ ಬಗ್ಗೆ ತಿಳಿದುಕೊಳ್ಳುವಂತೆ ಮಾಡುತ್ತಾಳೆ. ಗೈರು ಹಾಜರಿ ಕಡಿಮೆ, ಶಿಕ್ಷಣವನ್ನು ಅರ್ಧಕ್ಕೆ ಬಿಡುವುದು ಇಲ್ಲವೇ ಇಲ್ಲ, ವಿಜ್ಞನದ ತರಗತಿಗಳು ಹೆಚ್ಚು ಇಷ್ಟಪಡುವ ತರಗತಿಗಳಾಗಿವೆ ಮತ್ತು ವಿಜ್ಞನದ ಪ್ರಯೋಗಾಲಯಗಳಲ್ಲಿ ಕೆಲಸ ಮಾಡುವುದುಮತ್ತು ತರಗತಿಗಳಲ್ಲಿ ತಂತ್ರಜ್ಞಾನ ದ ಬಳಕೆ ಉಳಿದೆಲ್ಲಾ ಸರ್ಕಾರಿ ಶಾಲೆಗಳಿಗಿಂತ ಹೆಚ್ಚಾಗಿದೆ.

ಶ್ರೀಮತಿ ಕುಮಾರ್‌ಗೆ ಪ್ರತಿಯೊಂದು ವಿದ್ಯಾರ್ಥಿಯ ಕುಟುಂಬದ ಬಗ್ಗೆ ತಿಳಿದಿದೆ ಮತ್ತು ಎಲ್ಲಿಲ್ಲಿ ಅಗತ್ಯವಿದೆಯೋ ಅಲ್ಲೆಲ್ಲಾ ಸಹಾಯವನ್ನು ನೀಡುತ್ತಾಳೆ, ಆದ ಕುಟುಂಬಗಳ ವೈಯಕ್ತಿಕ ಆರೋಗ್ಯ ಮತ್ತು ಸ್ವಚ್ಛತೆಯನ್ನು ಹೆಚ್ಚು ಮಾಡುವ ತನ್ನೆಲ್ಲಾ ಪ್ರಯತ್ನಗಳಲ್ಲಿ ಅವರ ಪಾಲುದಾರಿಕೆಗಾಗಿ ಒತ್ತಾಯಿಸುತ್ತಾಳೆ. ಆ ವಿದ ತಾಯಂದಿರಿಗೆ ವೈದ್ಯಕೀಯ ಶಿಬಿರಗಳನ್ನು ಆಯೋಜಿಸುತ್ತಾಳೆ.

ಆಕೆ ಶಾಲೆಯ ನೋಟಿಸ್ ಬೋರ್ಡಿನ ಮೇಲೆ ಬರೆಯುವ ಪದ್ಯಗಳು ಮೂಲತ: ಆಕೆಯೇ ಬರೆದದ್ದಾವಾಗಿದ್ದು, ಇತರ ಶಿಕ್ಷಕರನ್ನು ಬದಲಾವಣೆಗೆ ಮಧ್ಯವರ್ತಿಗಳಾಗುವಂತೆ ಪ್ರೇರೇಪಿಸುವಂತೆ ಮಾಡುತ್ತವೆ. ಆಕೆಯು ತನ್ನ 'ಶಾಲಾ ಕುಟುಂಬ'ದಿಂದ ಪ್ರತಿಸಲವೂ ಪ್ರೀತಿ ಮತ್ತು ಗೌರವಗಳನ್ನು ಪಡೆದುಕೊಳ್ಳು

## ಚಟುವಟಿಕೆ 4: ಶ್ರೀಮತಿ ಕುಮಾರ್‌ರ ಶಾಲೆಯ ಸಾಂದರ್ಭಿಕ ಹಿನ್ನೆಲೆ

- ಶ್ರೀಮತಿ ಕುಮಾರ್ ಬದ್ಧತೆಯಿರುವ ಮತ್ತು ಪ್ರೀತಿಸುವ ಶಾಲಾ ನಾಯಕಿಯಾಗಿದ್ದು ತನ್ನ ಶಾಲೆಯ ಸನ್ನಿವೇಶದ ಬಗ್ಗೆ ಹೆಚ್ಚು ತಿಳಿದುಕೊಂಡಿದ್ದಾಳೆ ಎಂದು ಅನ್ನಿಸುತ್ತದೆ. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಗಳನ್ನು ನಿಮ್ಮ ಕಲಿಕಾ ಡೈರಿಯಲ್ಲಿ ಟಿಪ್ಪಣಿಯಾಗಿ ಬರೆದಿಕೊಳ್ಳಿ.
- ಶ್ರೀಮತಿ ಕುಮಾರ್ ತಮ್ಮ ಶಾಲೆಯ ಸನ್ನಿವೇಶದ ಬಗ್ಗೆ ಯಾವ ರೀತಿಯಲ್ಲಿ ಅರ್ಥಮಾಡಿಕೊಂಡಿದ್ದಾರೆ?
- ತನ್ನ ವಿದ್ಯಾರ್ಥಿಗಳ ಫಲಿತಾಂಶವನ್ನು ಉತ್ತಮಪಡಿಸಲು ಯಾವ ಅಂಕಿ–ಅಂಶಗಳು ಆಕೆಯನ್ನು ಸಮರ್ಥಳನ್ನಾಗಿ ಮಾಡಿಸಿತು ಎಂದು ನಿಮಗೆ ಅನ್ನಿಸುತ್ತದೆ?
- ವಿದ್ಯಾರ್ಥಿಗಳ ಕಲಿಕೆ ಮತ್ತು ಸಾಧನೆಗಳ ಮೇಲೆ ಆಕೆಯ ನಾಯಕತ್ವ ಬೀರಿದ ಪ್ರತ್ಯಕ್ಷ ಮತ್ತು ಪರೋಕ್ಷ ಪರಿಣಾಮಗಳೇನು?

### ಚರ್ಚೆ

ಶ್ರೀಮತಿ ಕುಮಾರ್ ತನ್ನೆಲ್ಲಾ ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ ಮತ್ತು ಅವರ ಕುಟುಂಬಗಳು ಮತ್ತು ಸಮುದಾಯದ ಹಿನ್ನೆಲೆಯನ್ನು ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗೆ ಸಂಭಾಷಿಸುವ ಮತ್ತು ಸಂಬಂಧಗಳನ್ನು ಬೆಳೆಸಿಕೊಳ್ಳುವ ಮೂಲಕ ಅರ್ಥಮಾಡಿಕೊಂಡಿದ್ದಾರೆ. ಬಹುಶ: ಆಕೆ ತನ್ನ ಸಿಬ್ಬಂದಿಯನ್ನು ಮೊದಲಿನಿಂದಲೂ ವಿದ್ಯಾರ್ಥಿಗಳ ಹಿನ್ನೆಲೆಯನ್ನು ಮಾಹಿತಿಯನ್ನು ಪಡೆದುಕೊಳ್ಳುವಲ್ಲಿ ತೊಡಗಿಸಿಕೊಂಡಿದ್ದಾಳೆ ಮತ್ತು ತನ್ನೆಲ್ಲಾ ವಿದ್ಯಾರ್ಥಿಗಳ ಕಲಿಕೆಯ ಅವಕಾಶಗಳನ್ನು ಒದಗಿಸಿಕೊಡುವಲ್ಲಿ ಮತ್ತು ಅವರು ಆಕಾಂಕ್ಷೆಗಳನ್ನು ಕಟ್ಟಿಕೊಳ್ಳುವಂತಾಗುವ ಗುರಿಯನ್ನು ತಲುಪವಲ್ಲೂ ಕೂಡ ಅವರನ್ನು ತೊಡಗಿಸಿಕೊಳ್ಳುವುದನ್ನು ಮುಂದುವರಿಸಿದ್ದಾಳೆ. ಈ ಉಪಗ್ರಹ ಡಿಷ್‌ನ ಸ್ಥಾಪನೆಯು ಸಾಧ್ಯವಾಗಿದ್ದು ಈ ಬಗ್ಗೆ ನಡೆದ ಮಾತುಕತೆಯಲ್ಲಿ

ಅಂಕಿ–ಅಂಶಗಳನ್ನು ಬಳಸಿಕೊಂಡಿದ್ದರಿಂದಲೇ. ವಿದ್ಯಾರ್ಥಿಗಳಲ್ಲಿ ಬದಲಾವಣೆ ತರುವಲ್ಲಿ ಆಕೆಯೊಂದಿಗೆ ಇತರ ಸಿಬ್ಬಂದಿಯೂ ಒಂದು ತಂಡವಾಗಿ ಹೇಗೆ ಕೆಲಸಮಾಡಬೇಕೆಂದು ಅವರು ಚರ್ಚಿಸಿರಬೇಕು.

ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಆಲೋಚಿಸುವಾಗಲೇ ಅದರ ಪ್ರತ್ಯಕ್ಷ ಮತ್ತು ಪರೋಕ್ಷ ಪರಿಣಾಮಗಳ ಬಗ್ಗೆ ಕೂಡ ಆಲೋಚಿಸುವುದು ಹೆಚ್ಚು ಉಪಯುಕ್ತ. ಕೇಸ್ ಸ್ಟಡಿ–1ರಲ್ಲಿ ನೀವು ಪ್ರತ್ಯಕ್ಷ ಪರಿಣಾಮಗಳನ್ನು ಗುರುತಿಸಿರಬಹುದು, ಕಡಿಮೆ ಗೈರು ಹಾಜರಾತಿ, ತರಗತಿಗಳಲ್ಲಿ ತಂತ್ರಜ್ಞನದ ಬಳಕೆ ಮತ್ತು ಅತ್ಯುತ್ತಮ ವಿಜ್ಞನದ ಉಪಕರಣಗಳ ಲಭ್ಯತೆ ಮೊದಲಾದವುಗಳನ್ನು ಒಳಗೊಂಡಂತೆ.

ಪರೋಕ್ಷ ಪರಿಣಾಮಗಳು ಸಾಮಾನ್ಯವಾಗಿ ವಿದ್ಯಾರ್ಥಿಗಳ ಒಳಿತನ್ನು ಒಳಗೊಂಡಿದ್ದು ಅವರೆಲ್ಲರೂ ಕಲಿಕೆಯ ಲಭ್ಯತೆಗಾಗಿ ಒಳ್ಳೆಯ ಪರಿಸರ ಮತ್ತು ಸಮುದಾಯವನ್ನು ಹೊಂದುವುದಕ್ಕೆ ಸಂಬಂಧಿಸಿದವಾಗಿರುತ್ತವೆ.

ಇದ್ಯಾವುದೂ ಆಕಸ್ಮಿಕವಲ್ಲ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರುವ ಮೂಲಕ ಬದಲಾವಣೆ ತರಬೇಕೆಂದರೆ ನಿಮ್ಮ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಅತಿಹೆಚ್ಚು ಕಷ್ಟವಾಗುವಂತಾಗಲು ಇರುವ ಅಡೆತಡೆಗಳು ಯಾವುವು ಎಂಬುದನ್ನು ಗುರುತಿಸುವುದು ಮುಖ್ಯ. ಮತ್ತು ಅವಕಾಶಗಳು ಲಭ್ಯವಿದ್ದು ಅವುಗಳನ್ನು ತೀರಾ ಕೆಳಮಟ್ಟದಲ್ಲಿ ಬಳಸಿಕೊಳ್ಳಲು ಇರುವ ಅಡೆತೆಗಳ ಬಗ್ಗೆಯೂ ಅರ್ಥಮಾಡಿಕೊಳ್ಳುವುದು ಮುಖ್ಯವಾಗುತ್ತದೆ. ನೀವು ಶಾಲಾ ನಾಯಕರಾಗಿ ಅಂಕಿ–ಅಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಗಳನ್ನು ಆಧರಿಸಿಯೇ ಹೇಗೆ ಅಡತಡೆಗಳನ್ನು ಮತ್ತು ಅವಕಾಶಗಳನ್ನು ಗುರುತಿಸುತ್ತೀರಾ

ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಆಲೋಚಿಸುವಾಗ, ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಪರಿಣಾಮಗಳ ಬಗ್ಗೆಯ ಅಲೋಚನೆಯು ಸಹಾಯವಾಗುತ್ತದೆ. ಕೇಸ್ ಸ್ಟಡಿ1ರಲ್ಲಿ ನೀವು ಕಲಿಕೆಯ ಪ್ರತ್ಯಕ್ಷ ಕಲಿಕೆಗಳನ್ನು ಗುರುತಿಸಿರಬಹುದು, ಅವುಗಳಲ್ಲಿ ಕೆಳಮಟ್ಟದ ಹಾಜರಾತಿ, ತರಗತಿಯಲ್ಲಿ ತಂತ್ರಜ್ಞನದ ಬಳಕೆ, ಮತ್ತು ಅತ್ಯುತ್ತಮ ವಿಜ್ಞನದ ಉಪಕರಣಗಳ ಲಭ್ಯತೆ, ಮೊದಲಾದವು. ಪರೋಕ್ಷವಾದ ಪರಿಣಾಮಗಳು ವಿದ್ಯಾರ್ಥಿಗಳ ಒಳಿತಿಗೆ ಸಂಬಂಧಿಸಿದುದಾಗಿದ್ದು ಕಲಿಕೆಗೆ ಉತ್ತಮ ವಾತಾವರಣವನ್ನು ವಿದ್ಯಾರ್ಥಿಗಳು ಮತ್ತು ಸಮುದಾಯಕ್ಕೆ ಲಭ್ಯವಾಗುವಂತೆ ನಿರ್ಮಿಸುವುದಾಗಿರಬಹುದು.

ಇದೇನು ಆಕಸ್ಮಿಕವಲ್ಲ. ವಿದ್ಯಾರ್ಥಿಗಳ ಕಲಿಕೆಯ ಮೇಲೆ ಪರಿಣಾಮ ಬೀರಲು ಬೇಕಾದಂತಹ ಬದಲಾವಣೆಗಳನ್ನು ಗುರುತಿಸಬೇಕು, ನಿಮ್ಮ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಇರುವ ಅತಿಹೆಚ್ಚಿನ ಕಷ್ಟಗಳನ್ನು ತಂದೊಡ್ಡುವ ಅಡೆತಡೆಗಳಿಗೆ ಇರುವ ಕಾರಣಗಳು ಮತ್ತು ಇರುವ ಅವಕಾಶಗಳು ಆದರೆ ಕೆಳಮಟ್ಟದಲ್ಲಿ ಬಳಕೆಯಾಗಿರಲು ಕಾರಣಗಳನ್ನು ಪ್ರಮುಖವಾಗಿ ಗುರುತಿಸಬೇಕು. ನೀವು ಶಾಲಾ ನಾಯಕರಾಗಿ ಈ ಅಡೆತಡೆಗಳು ಮತ್ತು ಅವಕಾಶಗಳು ಹೇಗೆ ಅಂಕಿ–ಅಂಶಗಳಲ್ಲಿ ಮತ್ತು ವಿಶ್ಲೇಷಣೆಯಲ್ಲಿ ಅಡಗಿದೆ ಎನ್ನುವುದನ್ನು ಗುರುತಿಸಬೇಕು.

# 2 ಎಲ್ಲರ ಕಲಿಕೆಯ ಫಲಿತಾಂಶಗಳನ್ನು ಉತ್ತಮಪಡಿಸಲು ಅಂಕಿ–ಅಂಶಗಳ ಬಳಕೆ

ಶಾಲಾ ಸಮುದಾಯದೊಳಗಿನ ವಿಭಿನ್ನತೆಯ ಬಗ್ಗೆ ಅಂಕಿ–ಅಂಶಗಳ ಸಂಗ್ರಹಣೆಯು ಸ್ಪಷ್ಟವಾದ ಗುರಿಯನ್ನು ಹೊಂದಿದೆ: ಎಲ್ಲಾ ವಿದ್ಯಾರ್ಥಿಗಳ ಕಲಿಕೆ ಮತ್ತು ಸಾಧನೆಗಳನ್ನು ಉತ್ತಮಪಡಿಸುವುದು. ಕೆಲವೊಂದು ಅಂಕಿ–ಅಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಯಲ್ಲಿ ಶಾಲಾ ನಾಯಕರು ಶಾಲಾ ಸಮುದಾಯವನ್ನು ಜಂಟಿಯಾಗಿ ಯೋಜನೆಗಳನ್ನು ರೂಪಿಸುವುದು, ಸಂಗ್ರಹಣೆ, ವಿಶ್ಲೇಷಣೆ ಮತ್ತು ಮಂಡನೆಗಳಲ್ಲಿ ಬಳಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಅಂಕಿ–ಅಂಶಗಳು ಶಾಲೆಯ ಬಗ್ಗೆ ಏನು ಹೇಳುತ್ತವೆ ಮತ್ತು ಶಾಲೆಗೆ ಹಾಜರಾಗುವ ವಿದ್ಯಾರ್ಥಿಗಳ ವಿಭಿನ್ನ ಅನುಭವಗಳ ಕುರಿತಾದ ಚರ್ಚೆಗಳನ್ನು ಉತ್ತೇಜಿಸಬೇಕಿರುವುದರಿಂದ ಇವರನ್ನು ಬಳಸಿಕೊಳ್ಳುವುದು ಮುಖ್ಯವಾಗುತ್ತದೆ.

ಸಮುದಾಯದ ಬೇರೆ ಬೇರೆ ಕಡೆಗಳಲ್ಲಿ ಕಲಿಕೆಗೆ ಇರುವ ತೊಡಕುಗಳನ್ನು ಸಮುದಾಯದ ಎಲ್ಲಾ ಸದಸ್ಯರು ಅರ್ಥಮಾಡಿಕೊಳ್ಳಲು ಹೀಗೆ ಅಂಕಿ–ಅಂಶಗಳನ್ನು ಜಂಟಿಯಾಗಿ ಬಳಸಿಕೊಳ್ಳಬೇಕಿದೆ, ಅಲ್ಲದೆ ಸಮುದಾಯದಲ್ಲಿನ ವಿಭಿನ್ನತೆಯ ನಡುವೆಯೂ ಉಂಟಾಗಬಹುದಾದಂತಹ ಕಲಿಕೆಗೆ ಅವಕಾಶಗಳನ್ನು ಹೆಚ್ಚಿಸಲು ಕೂಡ ಇದು ಅನುಕೂಲವಾಗುತ್ತದೆ. ಇದನ್ನು ಮುಂದಿನ ಹಂತಗಳಲ್ಲಿ ನೋಡಬಹುದಾಗಿದೆ.

ಅದೇನೆ ಇರಲಿ ಶಾಲಾ ನಾಯಕರ ಕೈಯಲ್ಲಿ ಕಾರ್ಯತಂತ್ರಗಳು ಮತ್ತು ಧೀರ್ಘಾವಧಿಯವರೆಗೂ ಬಳಸಬಹುದಾದಂತಹ ಅಂಕಿ–ಅಂಶಗಳು ಇರುತ್ತದೆ,ಪ್ರತ್ಯೇಕವಾಗಿ ಹೇಳುವುದಾದರೆ ಹಾಜರಾತಿ ಮತ್ತು ಕೌಶಲ್ಯಗಳು/ಪ್ರತಿಭೆಗಳಿಗೆ ಸಂಬಂಧಿಸಿದ ಅಂಕಿ–ಅಂಶಗಳು. ಪ್ರತಿಯೊಬ್ಬ ಶಿಕ್ಷಕರು ತಮ್ಮ ತರಗತಿಯಲ್ಲಿನ ವಿದ್ಯಾರ್ಥಿಗಳ ಹಾಜರಾತಿ ಮತ್ತು ಕೌಶಲ್ಯಗಳು/ಪ್ರತಿಭೆಗಳ ವಿಧಾನಗಳನ್ನು ಅರ್ಥಮಾಡಿಕೊಳ್ಳಬೇಕು, ಮತ್ತು ಎಲ್ಲಾ ವಿದ್ಯಾರ್ಥಿಗಳು ಸಂಪೂರ್ಣವಾಗಿ ಕಲಿಕೆಯಲ್ಲಿ ಭಾಗವಹಿಸುವಂತಾಗಲು ವೈಯಕ್ತಿಕವಾದ ಮತ್ತು ಗುಂಪು ಕಾರ್ಯ ತಂತ್ರಗಳನ್ನು ಗುರುತಿಸಿಕೊಳ್ಳಬೇಕು, ಶಾಲಾ ನಾಯಕರು ವಿದ್ಯಾರ್ಥಿಗಳ ಕಲಿಕೆಯಲ್ಲಿ ಭಾಗವಹಿಸಲು ಮತ್ತು ಸಾಧನೆಗಳ ಮೇಲೆ ಪರಿಣಾಮಬೀರುವ ಅಂಶಗಳನ್ನು ಅರ್ಥಮಾಡಿಕೊಳ್ಳಲು ಹಾಜರಾತಿ ಮತ್ತು ಕೌಶಲ್ಯಗಳು/ಪ್ರತಿಭೆಗಳ ವಿಸ್ತರಿಸಿ ವಿಶ್ಲೇಷಿಸಬೇಕಿದೆ.

**ಚಟುವಟಿಕೆ–5:ನಿಮ್ಮ ಅಂಕಿ–ಅಂಶಗಳ ವಿಶ್ಲೇಷಣೆ**

ನಿಮ್ಮ ಶಾಲೆಯಲ್ಲಿನ ವಿದ್ಯಾರ್ಥಿಗಳ ವಯಸ್ಸಿಗೆ ಅನುಗುಣವಾಗಿ ಹಾಜರಾತಿ ಮತ್ತು ಸಾಧನೆಗಳ (ಕೌಶಲ್ಯಗಳು/ಪ್ರತಿಭೆಗಳ) ಬಗ್ಗೆ ಅಂಕಿ–ಅಂಶಗಳನ್ನು ಲಭ್ಯವಾಗಿಸುವುದು ಹೇಗೆ ಎಂಬುದರ ಬಗ್ಗೆ ಆಲೋಚಿಸಿ. ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳ ಮೇಲೆ ಪರಿಣಾಮ ಬೀರಬಹುದಾದ ಅಂಶಗಳನ್ನು ಗುರುತಿಸಲು ಅಂಕಿ–ಅಂಶಗಳ ವಿಶ್ಲೇಷಣೆಗೆ ಇರುವ ಬೇರೆ ಬೇರೆ ದಾರಿಗಳ ಬಗ್ಗೆ ಕೆಲ ಸಮಯ ಆಲೋಚಿಸಿ ಪಟ್ಟಿ ಮಾಡಿ.( ಅಥವಾ ಈಗಾಗಲೆ ಮಾಡಿರಬಹುದು),(ಉದಾ. ಬೇರೆ ಬೇರೆ ವಿಷಯಗಳ ಬಗ್ಗೆ ಇರುವ ಕೌಶಲ್ಯಗಳನ್ನು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಲ್ಲಿ ಗುರುತಿಸುವುದು).

ನೀವು ಈಗಾಗಲೇ ಕೆಲವು ಗುಂಪುಗಳನ್ನು ವರ್ಗೀಕರಿಸಲು ಆಲೋಚಿಸಿರಬಹುದು ಅವುಗಳೆಂದರೆ ಲಿಂಗ, ವಿಕಲಾಂಗಚೇತರು ಮತ್ತು ಧರ್ಮವನ್ನು ಆಧರಿಸಿದ ಗುಂಪುಗಳು. ಆದರೆ ನಿಮ್ಮ ಶಾಲೆಯಲ್ಲಿನ ಕೆಳಮಟ್ಟದ ಸಾಧನೆಗಳನ್ನು ಉದ್ದೇಶಿಸಲು ಆದ್ಯತೆಯನ್ನು ಆಧರಿಸಿದ ಇನ್ನಿತರ ಅಂಶಗಳನ್ನು ಮರು ಪರೀಕ್ಷಿಸಬಹುದು. ಇವುಗಳಲ್ಲಿ ಪೀಠಿಕೆಯಲ್ಲಿ ಚರ್ಚಿಸಿದ ಅಂಶಗಳು ಸೇರಿರಬಹುದು.

ಶಾಲೆಯ ಹಾಜರಾತಿ ಮತ್ತು ಕೌಶಲ್ಯಗಳು/ಪ್ರತಿಭೆಗಳ ಮೇಲೆ ಪರಿಣಾಮ ಬೀರಬಹುದಾದ ಹಲವಾರು ಅಂಶಗಳಿಗೆ ಈ ಅಂಕಿ-ಅಂಶಗಳು ಅಡಿಪಾಯವಾಗಬಹುದು. ಮುಂದುವರೆದು ಈ ಅಂಕಿ-ಅಂಶಗಳು ಮತ್ತು ನಿಮ್ಮ ಬಳಿ ಇರುವ ಬೇರೆ ಬೇರೆ ಅಂಕಿ-ಅಂಶಗಳೊಂದಿಗೆ ಹೋಲಿಸಿ ಏನಾದರೂ ಪರಸ್ಪರ-ಸಂಬಂಧಗಳಿವೆಯೇ ಎಂಬ ಸಂಕೀರ್ಣ ವಿಶ್ಲೇಷಣೆಗಳ ಮೂಲಕ ನಿರ್ಧರಿಸಲು ಬೇಕಾಗಬಹುದು. (ಉದಾ: ಒಂದು ನಿರ್ದಿಷ್ಟ ಆದಿವಾಸಿ ಗುಂಪಿನ ವಿದ್ಯಾರ್ಥಿನಿಯರಲ್ಲಿ ಅಪೌಷ್ಠಿಕತೆಯಿರುವುದು). ಇದಿಷ್ಟೆ ಅಲ್ಲದೆ ಪೋಷಕರು ಮಾಡುವ ಒಂದು ನಿರ್ದಿಷ್ಟ ಕೆಲಸಕ್ಕೆ ಸಂಬಂಧಿಸಿದಂತೆ ತೀರ್ಮಾನಗಳನ್ನು ತಿಳಿಸಲು ಕೂಡ ಈ ಅಂಕಿ-ಅಂಶಗಳು ಅಗತ್ಯ. ( ಅಂದರೆ ಸುಗ್ಗಿಯ ಕಾಲದಲ್ಲಿ ಕೆಲವು ವಿದ್ಯಾರ್ಥಿಗಳ ಶಾಲೆಗೆ ಗೈರು ಹಾಜರಾಗುವುದು). ಹೀಗೆ ಅಂಕಿ-ಅಂಶಗಳನ್ನು ಯಾರು ಕಲಿಕೆಯಲ್ಲಿ ಭಾಗವಹಿಸುತ್ತಿದ್ದಾರೆ ಮತ್ತು ಯಾರು ಇಲ್ಲ ಎಂಬುದನ್ನು ಗುರುತಿಸಬಹುದು.

ಎಲ್ಲಿ ವಿದ್ಯಾರ್ಥಿಗಳ ವೈಯಕ್ತಿಕ ವಿವರಗಳು ನೇರವಾಗಿ ಹಾಜರಾತಿ ಮತ್ತು ಸಾಧನೆಗಳಿಗೆ (ಕೌಶಲ್ಯಗಳು/ಪ್ರತಿಭೆಗಳಿಗೆ) ಅನ್ವಯಿಸುತ್ತವೋ, ಅದಕ್ಕೆ ಸಂಬಂಧಿಸಿದಂತೆ ಶಾಲಾ ನಾಯಕರು ಕೆಲವು ಗುಂಪಿನ ವಿದ್ಯಾರ್ಥಿಗಳ ಕಲಿಕೆಯಲ್ಲಿನ ಫಲಿತಾಂಶಗಳನ್ನು ಉತ್ತಮಪಡಿಸಲು ನಿರ್ದಿಷ್ಟವಾದ ಕ್ರಿಯಾಯೋಜನೆಗಳನ್ನು ರೂಪಿಸಬಹುದು. ಹೀಗೆ ಆದ್ಯತೆಯ ಕ್ಷೇತ್ರಗಳಿಗೆ ಅಂಕಿ-ಅಂಶಗಳು ಸಾಕ್ಷಿಯಾಗಬಹುದು.

## ಚಟುವಟಿಕೆ 6: ನಿಮ್ಮ ಅಂಕಿ-ಅಂಶಗಳ ವಿಶ್ಲೇಷಣೆಯ ಬಳಕೆ

ಸಾಧನೆಗಳಿಗೆ (ಬಹುಶ: ಪರೀಕ್ಷೆಯ ಫಲಿತಾಂಶಗಳು) ಸಂಬಂಧಿಸಿದ ಅಂಕಿ-ಅಂಶಗಳನ್ನು ಬಳಸಿಕೊಳ್ಳುವುದು. ನೀವು ಈ ಸಮಸ್ಯೆ ಬರಬಹುದು ಎಂದು ಊಹಿಸಿರುವ ಒಂದು ಸಮಸ್ಯೆಯನ್ನು ವ್ಯವಹರಿಸಲು ಆಯ್ಕೆ ಮಾಡಿಕೊಳ್ಳಿ (ವಿಜ್ಞಾನದ ವಿಷಯದ ಫಲಿತಾಂಶದಲ್ಲಿ ಲಿಂಗ ಆಧಾರಿತ ವ್ಯತ್ಯಾಸಗಳು) ಈ ಕುರಿತಾದ ಅಂಕಿ-ಅಂಶಗಳ ಕ್ರೋಢೀಕರಣ ಮತ್ತು ಫಲಿತಾಂಶಗಳ ವಿಶ್ಲೇಷಣೆಗೆ ಸ್ವಲ್ಪ ಸಮಯ ಮೀಸಲಾಗಿಡಿ.

ನಿಮ್ಮ ಅಂಕಿ-ಅಂಶಗಳ ವಿಶ್ಲೇಷಣೆಯನ್ನು ಬಳಸಿಕೊಂಡು, ಸಂಪನ್ಮೂಲ1 ರಲ್ಲಿ ಸೂಚಿಸಿರುವ ಕ್ರಿಯಾ ಯೋಜನೆಯನ್ನು ಪೂರ್ಣಗೊಳಿಸಲು ಕೆಳಗೆ ನೀಡಿರುವ ಪ್ರಾಮಾಣಿಕ ಪ್ರಶ್ನೆಗಳಿಗೆ ಉತ್ತರಿಸಿ. ಟೇಬಲ್2 ರಲ್ಲಿ ಉದಾಹಣೆಯನ್ನು ನೀಡಲಾಗಿದೆ.

- ನಿಮ್ಮ ಶಾಲೆಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಸಂಬಂಧಿಸಿದಂತೆ ನೀವು ಆಯ್ಕೆ ಮಾಡಿಕೊಂಡಿರುವ ವಿಷಯದ ಬಗ್ಗೆ ಇರುವ ಅಂಕಿ-ಅಂಶಿ ಏನನ್ನು ಹೇಳುತ್ತದೆ?
- ಆ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಸಂಬಂಧಿಸಿದಂತೆ ಕೊಡುಗೆ ನೀಡಬಹುದಾದ ನೀವು ಊಹಿಸಿರುವ ಸಮಸ್ಯೆ ಯಾವುದು?
- ಸಮಸ್ಯೆಯನ್ನು ವಿಶ್ಲೇಷಿಸುವಲ್ಲಿ ಉಪಯುಕ್ತ ವಾಗಬಹುದಾದ ಇತರ ಅಂಕಿ-ಅಂಶಗಳನ್ನು ಗುರುತಿಸಿ.ಉದಾ: ವಿಜ್ಞಾನದ ವಿಷಯದಲ್ಲಿ ಹೆಚ್ಚು ಸಾಧನೆ ತೋರಿರುವ ವಿದ್ಯಾರ್ಥಿನಿಯರ ಸಾಮಾಜಿಕ-ಆರ್ಥಿಕ ಹಿನ್ನೆಲೆಯನ್ನು ಗುರುತಿಸುವುದು ಅಥವಾ ಗಣಿತದಲ್ಲಿ ಸಾಧನೆ ಅಥವಾ ಯಾವುದೇ ಪ್ರತ್ಯೇಕವಾದ ಶಿಕ್ಷಕರು.
- ನೀವು ಕ್ರಿಯಾ ಯೋಜನೆಯನ್ನು ರೂಪಿಸಲು ಮತು ಈ ನಿರ್ದಿಷ್ಟವಾದ ಗುಂಪಿನ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ಕಾರ್ಯ ತಂತ್ರಗಳನ್ನು ಅಭಿವೃದ್ಧಿಪಡಿಸಲು ಸಂಪರ್ಕಿಸಬೇಕಾದ ವ್ಯಕ್ತಿಯನ್ನು ಗುರುತಿಸಿ.
- ಕಲಿಕೆಯಲ್ಲಿ ಉತ್ತಮವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ವಿಷಯದ ಮೌಲ್ಯಮಾಪನ ಮಾಡಲು ನೀವೇನು ಮಾಡಬೇಕೆಂಬುದನ್ನು ಗುರುತಿಸಿ
- ಸೂಚನೆ: ಇದರಲ್ಲಿ ಮುಂದಿನ ವರ್ಷದ ಸಾಧನೆಗಳ ಅಂಕಿ-ಅಂಶಗಳನ್ನು ನೋಡುವುದಕ್ಕಿಂತಲೂ ಹೆಚ್ಚಿನದನ್ನು ಗಮನಿಸಬೇಕು.

ಟೇಬಲ್-2 ಅಂಕಿ-ಅಂಶಗಳ ಸಂಗ್ರಹಣೆಯ ಕ್ರಿಯಾ ಯೋಜನೆಯ ಪ್ರವೇಶಿಸಲು ಉದಾಹರಣೆ

| **ಅಂಕಿ–ಅಂಶಗಳ ಗುಂಪು** | **ವಿಶ್ಲೇಷಣೆಯ ಅಂಶಗಳು** | **ಫಲಿತಾಂಶದ ಮುಖ್ಯಾಂಶಗಳು** | **ಕಲಿಕೆಯ ಮೇಲೆ ಪರಿಣಾಮಗಳು** | **ಕ್ರಿಯೆಗಳು** | **ಮೌಲ್ಯಮಾಪನ** |
|---|---|---|---|---|---|
| ಹಾಜರಾತಿ | ಸುಗ್ಗಿಯ ಕಾಲದಲ್ಲಿ ಲಿಂಗ ಸಂಬಂಧಿ ಸಮಸ್ಯೆಗಳು | ಈ ಎರಡು ವಾರಗಳಲ್ಲಿ ಬಾಲಕರ ಮೂರನೇ ಒಂದು ಭಾಗದಷ್ಟು ಹಾಜರಾತಿ ಕಡಿಮೆ ಇರುತ್ತದೆ.<br><br>ಬಾಲಕಿಯರ ಹಾಜರಾತಿ ಶೇ.10%ರಷ್ಟು ಕಡಿಮೆಯಿರುತ್ತದೆ. | ಒಂದು ವಾರದಲ್ಲಿ ಐದು ಪ್ರಮುಖ ವಿಷಯಗಳ ಪಾಠಗಳ ನಷ್ಟ<br><br>ವಿಜ್ಞನದ ಪ್ರಮುಖ ಪರೀಕ್ಷೆಯ ತಯಾರಿಯಲ್ಲಿ ಅಡೆತಡೆಗಳು<br><br>ಈ ಗುಂಪಿನ ವಿದ್ಯಾರ್ಥಿಗಳ ಅಂತಿ,ಮ ಫಲಿತಾಂಶಗಳ ವಿಧಾನದ ಅಂಕಿ–ಅಂಶಗಳನ್ನು ಪರೀಕ್ಷಿಸಬೇಕು | ಹಿರಿಯ ನಾಯಕತ್ವ ತಂಡದೊಂದಿಗೆ ಈ ವಿಷಯವನ್ನು ಚರ್ಚಿಸಿ ಮತ್ತು ಮತ್ತು ಈ ವರ್ಷದ ಪರೀಕ್ಷೆಗಳಿಗೆ ಸಂಬಂದಿಸಿದ ತುರ್ತು ವಿಷಯವೆಂದು ಪರಿಗಣಿಸಿ ಪೋಷಕರೊಂದಿಗೆ ಚರ್ಚಿಸಲು ದಾರಿಗಳನ್ನು ಹುಡುಕುವುದು<br><br>ಕಳೆದ ವರ್ಷ ಈ ಪ್ರಮುಖ ವಾರಗಳಲ್ಲಿ ಗೈರುಹಾಜರಾದ ವಿದ್ಯಾರ್ಥಿಗಳ ಸಾಧನೆಗಳನ್ನು ವಿಜ್ಞನದ ವಿಭಾಗದಿಂದ ಅಂಕಿ–ಅಂಶಗಳನ್ನು ಪಡೆದುಕೊಳ್ಳುವುದು<br><br>ಈ ಪ್ರದೇಶದಲ್ಲಿ ಕಲಿಕೆಯ ಮೇಲಾಗಿರುವ ಪರಿಣಾಮಗಳ ಬಗ್ಗೆ ಎಲ್ಲಾ ವಿಷಯ ನಾಯಕರಗಳೊಂದಿಗೆ ಚರ್ಚೆ<br><br>ಮುಂಬರುವ ಸುಗ್ಗಿಯ ಕಾಲದಲ್ಲಿ ಶಾಲೆಯಿಂದ ಹೊರಗುಳಿಯ ಬಹುದಾದ ಅಪಾಯಕಾರಿ ಪರಿಸ್ಥಿತಿಯಲ್ಲಿರುವ ವಿದ್ಯಾರ್ಥಿಳನ್ನು ಗುರುತಿಸುವುದು | ಸುಗ್ಗಿಯ ಕಾಲದಲ್ಲಿನ ಹಾಜರಾತಿ<br><br>ಈ ಗುಂಪಿನ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶಗಳು |

ನೀವು ಹಾಜರಾತಿ ಮತ್ತು ಸಾಧನೆಗಳ ಅಂಕಿ–ಅಂಶಗಳನ್ನು ಹಲವಾರು ವಿಧದಲ್ಲಿ ವಿಶ್ಲೇಷಿಸಬೇಕು,ಮತ್ತು ಕೆಲಸಮಯದವರೆಗಿನ ಹಾಜರಾತಿ ಮತ್ತು ಸಾಧನೆಗಳ ವಿಧಾನಗಳನ್ನು ಅರ್ಥಮಾಡಿಕೊಳ್ಳಲು ವಾರ್ಷಿಕ ಯೋಜನೆಯನ್ನು ಅಭಿವೃದ್ಧಿಪಡಿಸುವುದು. ಇದರೊಂದಿಗೆ ಅಂಕಿ–ಅಂಶಗಳನ್ನು ಹೇಗೆ ವಿಶ್ಲೇಷಿಸಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾದ ಆದ್ಯತೆಯ ಕ್ಷೇತ್ರಗಳಿರುವಂತಹ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು. ನೀವು ಸಂಗ್ರಹಿಸುವ ಅಂಕಿ–ಅಂಶಗಳು ಹೆಚ್ಚು ವ್ಯವಸ್ಥಿತಗೊಳ್ಳುವಂತೆ ಕೆಲ ದಿನಗಳ ನಂತರದಲ್ಲಿ ಇದರಲ್ಲಿ ಬದಲಾವಣೆಗಳಾಗಬಹುದು. ನಿಮ್ಮ ಕೆಲವು ವಿದ್ಯಾರ್ಥಿಗಳ ಕಲಿಕೆಯ ಮೇಲೆ ದೀರ್ಘಾವಧಿಯ ಸಮಸ್ಯೆಗಳಿಂದಾಗಿ ನಕಾರಾತ್ಮಕ ಪ್ರಭಾವವನ್ನು ಬೀರಬಹುದು. ಇವುಗಳು ಯಾವುವು ಎಂಬುದು ನಿಮಗೆ ಈಗಾಗಲೇ ತಿಳಿದಿರಬಹುದು. ಆದರೆ ನೀವು ಈ ವಿಷಯಗಳೊಂದಿಗೆ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದೀರೆಂದು ಖಾತರಿಪಡಿಸಕೊಳ್ಳಲು ಅಂಕಿ–ಅಂಶಗಳನ್ನು ಜಾಗರೂಕತೆಯಿಂದ ವಿಶ್ಲೇಷಿಸಬೇಕು

## ಚರ್ಚೆ

ಈ ಚಟುವಟಿಕೆಯು ಆಂತರಿಕ ವಿಭಾಗಗಳ ನಡುವೆ ಅಂಕಿ–ಅಂಶಗಳ ವಿಶ್ಲೇಷಣೆಯ ಬಗ್ಗೆ ಎತ್ತಿ ಹೇಳುತ್ತದೆ ಮತ್ತು ಸಮಸ್ಯೆಗಳನ್ನು ಶಾಲಾ ಮಟ್ಟದಲ್ಲಿ ವಿಸ್ತಾರವಾಗಿ ವಿಶ್ಲೇಷಿಸಬೇಕಾಗುತ್ತದೆ. ಮತ್ತು ನಂತರದಲ್ಲಿ ಇವುಗಳ ಬಗ್ಗೆ ಮತ್ತಷ್ಟು ಆಳಕ್ಕಿಳಿದು ಅದನ್ನು ಬಗೆಹರಿಸಲು ಮೂಲ ಕಾರಣಗಳು ಅಥವಾ ಮೂಲ ಅಂಶಗಳನ್ನು ಗುರುತಿಸಬೇಕು. ಹೀಗೆ ಆಳಕ್ಕಿಳಿದು ನೋಡುವ ಚಟುವಟಿಕೆಯು ಹಲವಾರು ಅಂಕಿ–ಅಂಶಗಳಿರುವ ಟೇಬಲ್‌ನ್ನು ಒಬ್ಬರೇ ನೋಡಬೇಕಾಗುತ್ತದೆ; ಇದು ಸಂಪೂರ್ಣವಾಗಿ ಶಾಲಾ ಸಮುದಾಯವನ್ನೇ ತೊಡಗಿಸುವುದರೊಂದಿಗೆ ನಿಮ್ಮ ವಿದ್ಯಾರ್ಥಿಗಳ ಕಲಿಕೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲು ಅಗತ್ಯವಿರುವ ಅಂಕಿ–ಅಂಶಗಳ ಸಂಗ್ರಹಣೆ ಮತ್ತು ವಿಶ್ಲೇಷಣೆಯಲ್ಲಿ ಸಹಾಯ ಮಾಡುವ ಶಾಲಾ

ಸಿಬ್ಬಂದಿಯ (ವಿದ್ಯಾರ್ಥಿಗಳು ಮತ್ತು ಪೋಷಕರು ಸಾಧ್ಯವಿದ್ದಲ್ಲಿ) ನಾಯಕತ್ವವನ್ನು ನೀವು ವಹಿಸಿಕೊಳ್ಳಬೇಕು.

# 3 ನಿಮ್ಮ ಶಾಲೆಯಲ್ಲಿನ ವಿಭಿನ್ನತೆಯ ಸಂಪೂರ್ಣ ಚಿತ್ರಣವನ್ನು ಅಭಿವೃದ್ಧಿಪಡಿಸುವುದು

ನಿಮ್ಮ ಶಾಲೆಯೊಳಗಿನ ವಿಭಿನ್ನತೆಯನ್ನು ಅರ್ಥಮಾಡಿಕೊಳ್ಳುವಾಗ ಹಾಜರಾತಿ ಮತ್ತು ಸಾಧನೆಗಳ ಅಂಕಿ–ಅಂಶಗಳು ಮಾತ್ರ ಹೊರಬರುವುದಿಲ್ಲ ,ಇದರೊಂದಿಗೆ ನಿಮ್ಮ ಶಾಲೆಯ ವಿದ್ಯಾರ್ಥಿಗಳ ಅನುಭವಗಳನ್ನು ಹೊರತರುತ್ತದೆ. ಅಸಮಾನತೆಯಂತಹ ಸಮಸ್ಯೆಗಳನ್ನು ಬಗೆಹರಿಸುವಾಗ, ನೀವು ಶಾಲೆಯಲ್ಲಿನ ವಿಭಿನ್ನತೆಯನ್ನು ಒಳಗೊಂಡಂತೆ ಸಕಾರಾತ್ಮಕವಾದಂತಹ ಶಾಲಾ ಸಂಸ್ಕೃತಿಯನ್ನು ನಿರ್ಮಿಸುವಲ್ಲಿ ಇತರರನ್ನು ತೊಡಗಿಸಿಕೊಳ್ಳಬೇಕು. ಅಂಕಿ–ಅಂಶಗಳ ಸಂಗ್ರಹಣೆ ನಿಮ್ಮ ಗುರಿಯ ಭಾಗವಾದಾಗ ನೀವು ನಿಮ್ಮ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪೋಷಕರನ್ನು ನಿಮಗೆ ಬೇಕಿರುವ ಮಾಹಿತಿಯನ್ನು ಕಲೆಹಾಕಲು ಪ್ರೋತ್ಸಾಹಿಸಬೇಕು, ಹೀಗೆ ಗುರಿಗಳನ್ನು ನಿರ್ದಿಷ್ಟಪಡಿಸುವುದು ಸಹಜವಾಗಿಯೇ ಲಾಭವನ್ನು ತಂದುಕೊಡುತ್ತದೆ– ಜನರು ಕಲೆಹಾಕುವ ಅಂಕಿ–ಅಂಶಗಳನ್ನು ಬಳಸಿಕೊಳ್ಳುವುದಕ್ಕೆ ಬದಲಾಗಿ ತಾರತಮ್ಯತೆಗೆ ಬಳಸಿಕೊಳ್ಳಬಹುದೆನ್ನುವ ಅನುಮಾನವನ್ನು ವ್ಯಕ್ತಪಡಿಸಬಹುದು. ಈ ಸೂಕ್ಷ್ಮತೆಯು ಅಂಕಿ–ಅಂಶಗಳ ಬಳಕೆಯಲ್ಲಿ ಮಾತ್ರವಲ್ಲ ಅವುಗಳ ಸಂರಕ್ಷಣೆಯಲ್ಲಿ ವ್ಯಕ್ತವಾಗುತ್ತದೆ. ಹಾಗಾಗಿ ಇದನ್ನು ರಕ್ಷಿಸಿಡಲು ದಾರಿಗಳನ್ನು ಹುಡುಕುವ ಜವಾಬ್ದಾರಿಯೂ ನಿಮ್ಮದಾಗಿದ್ದು, ಅದರ ದುರುಪಯೋಗ ಅಥವಾ ಅನುಮತಿಯಿಲ್ಲದೆ ಬೇರೆಯವರೊಂದಿಗೆ ಹಂಚಿಕೆಯಾಗದಂತೆ ಕಾಪಾಡಬೇಕಾಗುತ್ತದೆ. ನಿಮಗೆ ಮಾಹಿತಿಯನ್ನು ಕೊಟ್ಟವರಿಗೆ ಅದನ್ನು ಹೇಗೆ ಕಾಪಾಡಲಾಗುತ್ತದೆ ಎಂಬುದನ್ನು ತಿಳಿಸಬೇಕಾಗುತ್ತದೆ.

## ಚಟುವಟಿಕೆ–7 : ಜಂಟಿಯಾಗಿ ಅಂಕಿ–ಅಂಶಗಳ ಸಂಗ್ರಹ

ನಿಮ್ಮ ಶಾಲೆಯಲ್ಲಿನ ವಿಭಿನ್ನತೆಯ ಬಗ್ಗೆ ಸಾಧನೆಯ ಅಂಕಿ–ಅಂಶ ಏನು ಹೇಳುತ್ತದೆ ಎಂಬುದರ ಬಗ್ಗೆ ಈಗ ನೋಡಿ., ಮತ್ತು ಇದನ್ನು ನಿಮ್ಮ ವಿದ್ಯಾರ್ಥಿಗಳಲ್ಲಿನ ಕಲಿಕೆಯ ಅವಕಾಶಗಳನ್ನು ಹೆಚ್ಚಿಸಲು ಹೇಗೆ ಬಳಸಿಕೊಳ್ಳಬೇಕು ಎಂಬುದರ ಬಗ್ಗೆ ಆಲೋಚಿಸಿ. ಸೂಕ್ತವಾದ ಕ್ರಮಗಳನ್ನು ಕೈಗೆತ್ತಿಕೊಳ್ಳಲು ಮತ್ತೇನ್ನನ್ನು ಹುಡುಕಿಕೊಳ್ಳಬೇಕು?

ಇನ್ನೂ ಹೆಚ್ಚಿನ ಅಂಕಿ–ಅಂಶಗಳನ್ನು ಯಾರು ಸಂಗ್ರಹಿಸಬೇಕು ಎಂಬುದನ್ನು ಗುರುತಿಸಲು ಸುಮಾರು 15 ನಿಮಿಷಗಳ ಸಮಯವನ್ನು ತೆಗೆದುಕೊಳ್ಳಿ;

- ನೀವು, ಸಂಪೂರ್ಣವಾಗಿ ನೀವೊಬ್ಬರೆ
- ನೀವು ಮತ್ತು ನಿಮ್ಮ ಶಿಕ್ಷಕರು
- ನಿಮ್ಮ ಶಿಕ್ಷಕರು ಮತ್ತು ನಿಮ್ಮ ವಿದ್ಯಾರ್ಥಿಗಳು
- ಶಾಲಾ ನಿರ್ವಹಣಾ ಸಮಿತಿ
- ಸ್ಥಳೀಯ ಸಮುದಾಯ ಮತ್ತು ಪೋಷಕರು

ಅಂಕಿ–ಅಂಶಗಳನ್ನು ಸಂಗ್ರಹಿಸಲು ನಿಮ್ಮ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಲ್ಲಿ ಇರಬೇಕಾದ ಮಾಹಿತಿ, ಕೌಶಲ್ಯಗಳು ಮತ್ತು ಜ್ಞಾನಗಳನ್ನು ಪಟ್ಟಿ ಮಾಡಿ. ನಿಮ್ಮ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಅಂದಾಜುಗೊಳಿಸಿ, ಮತ್ತು ಈ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬಹುದಾದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಹೆಸರನ್ನು ಮತ್ತು ಯಾವ ರೀತಿಯ ಅಂಕಿ–ಅಂಶಗಳನ್ನು ಸಂಗ್ರಹಿಸಬಲ್ಲರು ನಿಮ್ಮ ಕಲಿಕಾ ಡೈರಿಯಲ್ಲಿ ಬರೆದಿಟ್ಟುಕೊಳ್ಳಿ. ಮೊದಲ ಸುತ್ತಿನ ಅಂಕಿ– ಅಂಶಗಳನ್ನು ಸಂಗ್ರಹಣೆಯಲ್ಲಿ ಭಾಗವಹಿಸಿದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಸಾಮಾರ್ಥ್ಯವನ್ನು ಅಭಿವೃದ್ಧಿಪಡಿಸಲು ನೀವೇನು ಮಾಡುತ್ತೀರಿ ಎನ್ನುವುದನ್ನು ಬರೆದಿಟ್ಟುಕೊಳ್ಳಿ. ನಿಮ್ಮ ಪಠ್ಯಕ್ರಮದಲ್ಲಿ ಈ ಚಟುವಟಿಕೆಯನ್ನು ಹೇಗೆ ಅಳವಡಿಸಿಕೊಳ್ಳುತ್ತೀರೆಂಬುದರ ಬಗ್ಗೆಯೂ ಪರಿಗಣಿಸುವುದು ಒಳ್ಳೆಯದು. (ಉದಾ,ಗಣಿತದ ಪಾಠಗಳ ಅಂಕಿ–ಅಂಶಗಳ ವಿಶ್ಲೇಷಣೆ ಅಥವಾ ಭಾಷೆಯ ಪಾಠಗಳಲ್ಲಿ ಪ್ರಶ್ನಾವಳಿಗಳನ್ನು ಬರೆಯುವುದು). ಈ ಅಂಕಿ–ಅಂಶಗಳನ್ನು ಸಂಗ್ರಹಣೆಯಲ್ಲಿ ಯಾರನ್ನು ತೊಡಗಿಸಲಾಗುತ್ತದೆ ಎಂದು ನಿರ್ಧರಿಸಿದ ಮೇಲೆ, ನಿಮ್ಮ ಆಲೋಚನೆಗಳನ್ನು ಮತ್ತು ಹೇಗೆ ತೀರ್ಮಾನಕ್ಕೆ ಬಂದಿರಿ ಎಂಬುದರ ಬಗ್ಗೆ ಹಂಚಿಕೊಳ್ಳಿ. ಸಂಬಂಧಿಸಿದ ಸಿಬ್ಬಂದಿಗಳೊಂದಿಗೆ ಕುಳಿತು ಈಗಾಗಲೇ ವರದಿಗಾರಿಕೆಯ ಭಾಗವಾಗಿ ಶಾಲೆಯು ಸಂಗ್ರಹಿಸಿದ ಮಾಹಿತಿಯನ್ನು ಹೋಲಿಸಿ ನೋಡಲು ಇದು ಸೂಕ್ತವಾದ ಸಮಯ. ( ಸರ್ಕಾರದ ನಿಯಮಗಳಿಗೆ ಅನುಗುಣವಾಗಿ ಅಗತ್ಯವಿರುವುದು)

## ಚಟುವಟಿಕೆ–8 ಜೊತೆಯಾಗಿ ಯೋಜನೆಗಳನ್ನು ರೂಪಿಸುವುದು; ಏಕೆ, ಏನು ಮತ್ತು ಯಾರು

ನಿಮ್ಮಲ್ಲಿ ಈಗಾಗಲೇಇರುವ ಅಂಕಿ–ಅಂಶಗಳು  ಮತ್ತು ನಿಮಗೆ ಇನ್ನೂ ಬೇಕಿರುವ ಅಂಕಿ–ಅಂಶಗಳನ್ನು ಸಂಗ್ರಹಿಸಲು ಯಾರನ್ನು ತೊಡಗಿಸಬೇಕು ಎಂಬುದರ ಬಗ್ಗೆ ನೀವು ಗುರುತಿಸಲು ಆರಂಭಿಸಿರಬಹುದು.  ನೀವೀಗ ಆಲೋಚಿಸಬೇಕಿರುವುದು ಇದನ್ನು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಹೇಗೆ ತಿಳಿಸಬೇಕು ಎಂಬುದರ ಬಗ್ಗೆ. ಅಂಕಿ–ಅಂಶಗಳ ಸಂಗ್ರಹಣೆಯ ಚಟುವಟಿಕೆಯನ್ನು ಪರಿಚಯಿಸಲು ನಂಬಲರ್ಹವಾದ ಮತ್ತು ಪ್ರಭಾವಯುತವಾದ ಕೇಸ್‌ನ್ನು ಹೇಗೆ ಸಿದ್ಧಪಡಿಸುತ್ತೀರೆಂದು ಆಲೋಚಿಸಿ ಮತ್ತು ಇದು ನಿಮಗೆ ಯೋಜನೆಯನ್ನು ರೂಪಿಸಲು ಮತ್ತು ಮೌಲ್ಯಮಾಪನ ಮಾಡಲು ಇದು ಅಡಿಪಾಯವಾಗುವುದು, ಇತರರೊಂದಿಗೆ ಈ ಕೆಲಸವನ್ನು ಮಾಡುವುದರಿಂದ ನಿಮಗೆ ಸಹಾಯವಾಗಬಹುದು ಎಂದು ನಿಮಗೆ ಅನ್ನಿಸಬಹುದು.  ನಿಮ್ಮ ಕಲಿಕಾ ಡೈರಿಯಲ್ಲಿ ನಾಲ್ಕು ಅಥವಾ ಐದು **ಮಾರಾಟ ಮಾಡಬಹುದಾದ ಅಂಶಗಳನ್ನು** ಬರೆದಿಟ್ಟುಕೊಳ್ಳಿ. ನೀತಿ ನಿಯಮಗಳ ಚಾಲಕರನ್ನು ( ಎನ್‌ಸಿಎಫ್ ಮತ್ತು ಶಿಕ್ಷಣ ಹಕ್ಕು) ಮತ್ತು

ಶಾಲೆಗಾಗುವ ಅನುಕೂಲಗಳನ್ನು ಸೇರಿಸುವುದನ್ನು ನೆನಪಿನಲ್ಲಿಟ್ಟುಕೊಳ್ಳಿ.  ಮತ್ತು ಸಂಪನ್ಮೂಲ 2 ಅಡಕಗೊಳಿಸಲು ಉಪಯುಕ್ತ ಮಾರ್ಗದರ್ಶಿಯಾಗಬಹುದು.

ಸಿಬ್ಬಂದಿಗಳ ಸಭೆಗೆ ಈ ಮಾರಾಟ ಮಾಡಬಹುದಾದ ಅಂಶಗಳನ್ನು ತೆಗೆದುಕೊಂಡು ಹೋಗಿ ಅಥವಾ ವಿದ್ಯಾರ್ಥಿಗಳನ್ನು ಒಳಗೊಂಡಂತ ಸಿಬ್ಬಂದಿಗಳ ಶಾಲಾ ಸಭೆಗೆ ಆಹ್ವಾನಿಸಿ. ನೀವು ಪ್ರಸ್ತಾಪಿಸುತ್ತಿರುವ ಅಂಕಿ–ಅಂಶಗಳ ಸಂಗ್ರಹಣೆಯ ಚಟುವಟಿಕೆಗೆ ತಕ್ಷಣದಲ್ಲೇ ಒಪ್ಪಿಗೆ ಸಿಗುತ್ತದೆ ಎಂದು ನಿರೀಕ್ಷಿಸಬೇಡಿ, ಆದ್ದರಿಂದ ಇತರರುಇದರ ಬಗ್ಗೆ ಯಾವ ಕಾರಣಗಳನ್ನು  ನೀಡಬಹುದು ಎಂಬುದರ ಬಗ್ಗೆ ಯೋಚಿಸಿ. ಹಾಗಾದಾಗ ನೀವು ಅವರ ಪ್ರಶ್ನೆಗಳಿಗೆ ಉತ್ತರಿಸಬಹುದು ಅಥವಾಅವರ ಅನುಮಾನಗಳು ಮತ್ತು ಟೀಕೆಗಳಿಗೆ ಪ್ರತಿಕ್ರಿಯಿಸಬಹುದು.

ಮಾರಾಟ ಮಾಡಬಹುದಾದ ಅಂಶಗಳೊಂದಿಗೆ **ನೀವು** ಸಂಗ್ರಹಿಸಲು ಉದ್ದೇಶಿಸಿರುವ ಅಂಕಿ–ಅಂಶಗಳನ್ನು ಕುರಿತಾದ ನಿರ್ದಿಷ್ಟ ಅಂಶಗಳ ಬಗ್ಗೆ ಪ್ರಸ್ತಾವನೆ ನಿಮ್ಮ ಬಳಿಯಿರಬೇಕು. ಬಹುಶ: ಇದು ಪ್ರತಿಯೊಂದು ಶಾಲೆಗೂ ಬೇರೆಯದೇ ಆಗಿರುತ್ತದೆ ಮತ್ತು ಕೆಲಸಮಯದ ನಂತರದಲ್ಲಿ ಶಾಲಾ ಮಟ್ಟದಲ್ಲಿ ಬದಲಾಗುತ್ತಾ ಹೋಗಬಹುದು.  ನೀವು ಇನ್ನೂ ಕೆಲವು ಅಂಶಗಳನ್ನು ಸೇರಿಸಬಹುದು ಅಥವಾ ಸಹದ್ಯೋಗಿಗಳ ಸಲಹೆಗಳನ್ನು ಸೇರಿಸಬಹುದು.

ನೀವು ಹಂಚಿಕೊಳ್ಳಬೇಕಾಗಿರುವುದು ಕಾರ್ಯಯೋಜನೆಯ ಮೂರನೇ ಭಾಗವಾಗಿದ್ದು, ಇದನ್ನು ಹೇಗೆ ಸಂಘಟಿಸಬಹುದು ಮತ್ತು ಹೇಗೆ ಮುಂದಾಳತ್ವ ವಹಿಸಿಕೊಳ್ಳಬೇಕು ಎನ್ನುವುದು.  ನೀವು ಈಗಾಗಲೇ ಈ ಯೋಜನೆಯ ಮುಂದಾಳತ್ವವನ್ನು ವಹಿಸುವವರು ಯಾರೆಂದು ಗುರುತಿಸಿದ್ದಲ್ಲಿ, ಅದನ್ನು ಹಂಚಿಕೊಳ್ಳಿ ಅಥವಾ ಶಿಕ್ಷಕರಿಗೆ ಸ್ವಯಂ ಸೇವಕರಾಗಲು ಅಥವಾ ಯಾರನ್ನಾದರೂ ನಾಮಕರಣ ಮಾಡಲು ಕೇಳಿ.  ಸಭೆಯ ಕೊನೆಯಲ್ಲಿ ಈ ಕಾರ್ಯಯೋಜನೆಯಲ್ಲಿ ನಿಮ್ಮೊಂದಿಗೆ ಕೆಲಸ ಮಾಡಲು ಇಚ್ಛೆಪಟ್ಟಿರುವುದಕ್ಕೆ ಧನ್ಯವಾದಗಳನ್ನು ತಿಳಿಸುವುದನ್ನು ಮರೆಯಬೇಡಿ.  ನೀವು ಮೊದಲು ನಿಮ್ಮ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಉತ್ತೇಜಿಸಿ, ಏಕೆಂದರೆ ಅವರು ನಿಮ್ಮಿಂದ ಮಾರ್ಗದರ್ಶನಗಳನ್ನು ಪಡೆದುಕೊಳ್ಳಬೇಕು. ವಿದ್ಯಾರ್ಥಿಗಳ ಕಲಿಕೆ ಮತ್ತು ಸಾಧನೆಗಳನ್ನು ಉತ್ತಮಪಡಿಸಲು ಮಾಹಿತಿಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದರ ಬಗ್ಗೆ ಸಲಹೆಗಳನ್ನು ನೀಡಲು ಅವರ ಜ್ಞನದ ಬಳಕೆ ಮತ್ತು ಅದರ ಪರಿಣಾಮಗಳ ಬಗ್ಗೆ ಆಳವಾಗಿ ಆಲೋಚಿಸಬೇಕು.

### ಚರ್ಚೆ:

ಅಂಕಿ–ಅಂಶಗಳ ಚರ್ಚೆಯನ್ನು ಆರಂಭಿಸುವುದರೊಂದಿಗೆ, ನಿಮ್ಮ ಸಿಬ್ಬಂದಿಮತ್ತು ವಿದ್ಯಾರ್ಥಿಗಳು ಕಾರ್ಯ ಯೋಜನೆಗೆ ಕಾರಣಗಳನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ ವಿಚಾರಣೆಗಳು ಮತ್ತು ಆತಂಕಗಳನ್ನು ನಿವಾರಿಸಿಕೊಳ್ಳುವುದರೊಂದಿಗೆ ತಮ್ಮ ಆಲೋಚನೆಗಳನ್ನು ಸೇರಿಸುತ್ತಾರೆ. ನಿಮ್ಮ ಶಾಲೆಯಲ್ಲಿ ಈ ಕಾರ್ಯ ಯೋಜನೆಯ ಬಗ್ಗೆ ಮಾತುಗಳು ಕೇಳಿ ಬರಬಹುದು ಮತ್ತು ನಿಮ್ಮ ತಂಡ ಕೂಡ ಅದನ್ನು ಗುರುತಿಸುತ್ತದೆ.

ಕೇಸ್ ಸ್ಟಡಿ–2ನ್ನು ಓದಿ, ಶಾಲಾ ನಾಯಕರೊಬ್ಬರ ಬಗ್ಗೆಯಿದು, ಆಕೆಯ ತಂಡದವರು ಆಕೆ ಕೆಲಸವನ್ನು ಹೇಗೆ ತಂಡದ ಸದಸ್ಯರ ನಡುವೆ ಹಂಚಿದರು ಮತ್ತು ಮೌಲ್ಯಮಾಪನಕ್ಕೆ ಮಾದರಿಗಳನ್ನು ಸಿದ್ಧಪಡಿಸಿ ಮತ್ತು ಅವುಗಳನ್ನು ಹೇಗೆ ಕ್ರೋಢಿಕರಿಸಿದಳು ಎಂಬುದರ ಬಗ್ಗೆ ಮಾತನಾಡುವುದರ ಬಗ್ಗೆ ಕೇಸ್ ಸ್ಟಡಿ ಹೇಳುತ್ತದೆ.

## ಕೇಸ್ ಸ್ಟಡಿ–2 ಶ್ರೀಮತಿ ಕಾಜ಼ಿ ತನ್ನ ತಂಡದವರಲ್ಲಿ ಕೆಲಸವನ್ನು ನಿಯೋಜಿಸಿದಳು

**ಶ್ರೀಮತಿ ಕಾಜ಼ಿ** ನಮ್ಮ ಶಾಲಾ ಸಮುದಾಯದ ಬಗ್ಗೆ ಸಂಗ್ರಹಿಸಬೇಕಾಗಿದ್ದ ಮಾಹಿತಿಯನ್ನು ನೀವೆಲ್ಲರೂ ಒಟ್ಟಾಗಿ ಕಲೆ ಹಾಕಿ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಇನ್ನು ಮುಂದೆಯೂ ಕೂಡ ಅಂಕಿ–ಅಂಶಗಳನ್ನು ಕಲೆಹಾಕುವ ಪ್ರಕ್ರಿಯೆಯನ್ನು ಎದುರು ನೋಡುತ್ತಿದ್ದೇನೆ, ವಿಶೇಷವಾಗಿ ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವುದನ್ನು ಮತ್ತು ಅಂಕಿ–ಅಂಶಗಳನ್ನು ತರಗತಿಗಳಲ್ಲಿ ನಾವು ಬಳಸುವುದನ್ನು ಎದುರು ನೋಡುತ್ತೇನೆ. ಕೊನೆಯದಾಗಿ ನಮ್ಮ ಶಾಲೆಯ ಎಲ್ಲಾ 1500 ವಿದ್ಯಾರ್ಥಿಗಳು ಅತ್ಯುತ್ತಮ ಮಟ್ಟದಲ್ಲಿ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನವುದನ್ನು ಕಂಡುಕೊಳ್ಳಲು ನಮಗೆ ಸಾಧ್ಯವಾಗುತ್ತದೆ.

ಇಂದು ನಮಗೆ 20 ನಿಮಿಷಗಳ ಸಮಯಾವಕಾಶವಿದ್ದು ನಾವು ಒಂದು ಅಥವಾ ಕ್ಷೇತ್ರಗಳ ಜವಾಬ್ದಾರಿಯನ್ನು ತೆಗೆದುಕೊಳ್ಳಲಿದ್ದೇವೆ ಎಂದು ನಿರ್ಧರಿಸಲು, ಯಾರೇ ಒಬ್ಬರ ಮೇಲೆ ಹೆಚ್ಚಿನ ಹೊರೆಯಾಗದಂತೆ ಜೊತೆಯಲ್ಲೇ ಅಂಕಿ–ಅಂಶಗಳನ್ನು ಸಂಗ್ರಹಿಸುತ್ತೇವೆ. ನಾವೆಲ್ಲರೂ ಒಟ್ಟಾಗಿ ಒಬ್ಬರನ್ನು ಆಯ್ಕೆ ಮಾಡಲಿದ್ದುಅವರು ನಮ್ಮನ್ನು ಕೆಲಸಗಳ ಬಗ್ಗೆ ಎಚ್ಚರಿಸುತ್ತಾ ಕರೆಗಂಟೆಯ ವ್ಯವಸ್ಥೆಯಾಗಿದ್ದು ಕೊಂಡು ನಮ್ಮ ಕೆಲಸಗಳತ್ತ ಸದಾ ನಿರತರಾಗಿರುವಂತೆ ಮಾಡುತ್ತಾರೆ. ಜೊತೆಗೆ ಕೆಲಸಗಳು ಸ್ಥಗಿತಗೊಂಡಾಗ ವಿಷಯಗಳ ಬಗ್ಗೆ ಚರ್ಚಿಸಲು ಅಥವಾ ನಾವು ಕೆಲವು ವಿಷಯಗಳನ್ನು ಕಂಡುಕೊಂಡು ಚಕಿತರಾಗಿದ್ದಾಗ ನೆರವಾಗುತ್ತಾರೆ.

**ಶ್ರೀಮತಿ ಮೆಹ್ತಾ** ಹೌದು ಧನ್ಯವಾದಗಳು ಶ್ರೀಮತಿ ಕಾಜ಼ಿ, ನನಗೆ ವಹಿಸಿರುವ ಕ್ಷೇತ್ರಗಳ ಬಗ್ಗೆ ನನಗೆ ಸಂತೋಷವಾಗಿದೆ. ನನ್ನ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಲಸಗಳನ್ನು ವಹಿಸಿದ್ದೀರಾ ಎಂಬುದನ್ನು ಗಮನಿಸಿದ್ದೇನೆ. ಶ್ರೀಮತಿ ನಾಗರಾಜು ನಮಗೆ ಎಚ್ಚರಿಸುವವರು (reminder) ಆಗುವುದಾದರೆ ನನಗೆ ಸಂತೋಷವಗುತ್ತದೆ.

**ಶ್ರೀಮತಿ ನಾಗರಾಜು** ಖಂಡಿತಾ ಶ್ರೀಮತಿ ಮೆಹ್ತಾ. ನನಗೂ ಕೂಡ ಸಂತೋಷವಾಗಿದೆ ನನಗೆ ವಹಿಸಿರುವ ಕೆಲಸಗಳ ಬಗ್ಗೆ. ಶ್ರೀಮತಿ ಕಾಜ಼ಿ,ರವರೇ ನನಗೆ ವಹಿಸಿರುವ ಭಾಷೆಯ ಬಗ್ಗೆ ಅಂಕಿ–ಅಂಶಗಳನ್ನು ವಹಿಸಿರುವ ಕೆಲಸ ನನಗೆ ಒಪ್ಪಿಗೆಯಾಗಿದೆ. ನೆರೆಹೊರೆಯಲ್ಲಿ ವಿಚಾರಣೆ ಮಾಡುವುದು ನನಗೆ ಕಷ್ಟವಗಬಹುದು ಏಕೆಂದರೆ ನಮ್ಮ ಮಾವನವರು ಈಗಷ್ಟೇ ಆಸ್ಪತ್ರೆಗೆ ದಾಖಲಾಗಿದ್ದರು ಮತ್ತು ಮನೆಯಲ್ಲಿ ಒಬ್ಬರ ನಂತರ ಮತ್ತೊಬ್ಬರು ಅವರನ್ನು ನೋಡಿಕೊಳ್ಳಬೇಕಿದೆ. ಸಮೀಕ್ಷೆಯನ್ನು ಮಕ್ಕಳು ನಡೆಸಬಹುದು ಮತ್ತು ನಾನು ಖುದ್ದಾಗಿ ಕೆಲವು ಸ್ಥಳಗಳಲ್ಲಿ ಭೇಟಿಕೊಟ್ಟು ನಡೆಯುತ್ತಿದೆಯೆಂದು ಖಾತರಿಪಡಿಸಿಕೊಂಡರೆ ಸಾಕೆಂದು. . . ಆದರೂ ನಾನುಮಾಡಬಲ್ಲೆಂದು ನನಗೆ ಅನ್ನಿಸುತ್ತಿಲ್ಲ.

**ಶ್ರೀಮತಿ ಕಾಜ಼ಿ** ಓಹ್ ಪ್ರೀತಿಯ ಶ್ರೀಮತಿ ನಾಗರಾಜುರವರೇ! ನನಗೆ ಇದರ ಅರಿವಿಲ್ಲ ಎಂದುಕೊಂಡಿದ್ದೀರಾ! ಇದನ್ನು ನಿಮಗೆ ಕೊಡಬೇಕೆಂದು ಆಲೋಚಿಸಿದ್ದೆ ಏಕೆಂದರೆ ನೀವು ಶಾಲೆಗೆ ಸ್ಕೂಟರ್‌ನಲ್ಲಿ ಬರುತ್ತಿದ್ದು, ನೀವದನ್ನು ಸಮೀಕ್ಷೆ ನಡೆಸಲು ಬಳಸಿಕೊಳ್ಳಬಹುದು. ನಾವು ನಿಜವಾಗಲೂ ನಮ್ಮ ವಿದ್ಯಾರ್ಥಿಗಳ ಮನೆಯಲ್ಲಿನ ಭಾಷಾ ಬಳಕೆಯ ಅರ್ಥಮಾಡಿಕೊಳ್ಳಬೇಕಿದೆ. ಮತ್ತು ಇದನ್ನು ನಮ್ಮಲ್ಲಿ ಹಲವರು ಶಾಲೆಯ ಶೈಕ್ಷಣಿಕ ಫಲಿತಾಂಶಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಅಂಶವೆಂದು ಹೇಳಿರುತ್ತಾರೆ. ಅದನ್ನು ನಿರೂಪಿಸಲು ನಮ್ಮಲ್ಲಿ ಯಾವುದೇ ಅಂಕಿ–ಅಂಶಗಳಿಲ್ಲ! ಹಾಗಾಗಿ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

**ಶ್ರೀ ಬೆಹರಮ್** ಒಳ್ಳೆಯದು, ನಾನು ನನ್ನ ಸೈಕಲ್ಲಿನಲ್ಲಿ ಹೋಗಿಯೇ ಮಾಡಬಹುದು ಶ್ರೀಮತಿ ಕಾಜ಼ಿ. ನಾನೇಕೆ ನೆರೆಹೊರೆ ಸಮೀಕ್ಷೆಯನ್ನು ತೆಗೆದುಕೊಳ್ಳಬಾರದು? ಈ ಆಲೋಚನೆ ನನ್ನನ್ನು ಆಕರ್ಷಿಸಿದೆ. ಇದಕ್ಕೆ ಪ್ರತಿಯಾಗಿ ನನಗೆ ಕೊಟ್ಟಿರುವ ಪ್ರತಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳ ಧರ್ಮವನ್ನು ಕಂಡುಕೊಳ್ಳುವುದನ್ನು ನಿಮಗೆ ಕೊಡುತ್ತೇನೆ ಮತ್ತು ಶ್ರೀಮತಿ ನಾಗರಾಜು ನನಗೆ ನೀವು ಎಚ್ಚರಿಸುವವರು (reminder) ಆಗಿರಿ, ಜೊತೆಗೆ ತಾವು ನೋಡಿರುವ ಸ್ಥಳಗಳ ಬಗ್ಗೆ ನನಗೆ ತಿಳಿಸಿ,ಅವುಗಳು ನನಗೆ ತಿಳಿದಿರದೇ ಇರಬಹುದು.

| | |
|---|---|
| ಶ್ರೀಮತಿ ನಾಗರಾಜು | ಧನ್ಯವಾದಗಳು ಶ್ರೀ ಬೆಹರಮ್ – ಈ ಪರಸ್ಪರ ಬದಲಾವಣೆಗಳನ್ನು ಮಾಡಿಕೊಳ್ಳಲು ನಾನು ಹರ್ಷಿಸುತ್ತೇನೆ ಮತ್ತು ನಿಮಗೆ ಎಚ್ಚರಿಸುವವರು (reminder) ಆಗಿರಲೂ ಕೂಡ! ಶ್ರೀಮತಿ ಕಾಜ಼ಿ ನೀವು ನನಗೆ ಎಚ್ಚರಿಸುವವರು (reminder) ಆಗಿರಲೂ ಒಪ್ಪುತ್ತೀರಾ? |
| ಶ್ರೀಮತಿ ಕಾಜ಼ಿ | ಒಳ್ಳೆಯದು ಬಹಳ ಶೀಘ್ರವಾಗಿ ಇದನ್ನು ಬಗೆಹರಿಸಿದ್ದೀರಾ– ಎಂತಹ ನಿರಾಳ! ಶ್ರೀಮತಿ ನಾಗರಾಜು ನಾನು ನಿಮಗೆ ಎಚ್ಚರಿಸುವವರು (reminder) ಆಗಿರಲು ಒಪ್ಪುತ್ತೇನೆ. ಯಾರಿಗಾದರೂ ವಿಚಾರಣೆಗಳನ್ನು ನಡೆಸುವ ವಿಚಾರದಲ್ಲಿ ಏನಾದರು ತೊಂದರೆಗಳಿವೆಯೇ? |
| ಶ್ರೀಮತಿ ಚಡ್ಡಾ | ಸಾಮಾಜಿಕ–ಆರ್ಥಿಕ ಸ್ಥಾನಮಾನಗಳ ಬಗ್ಗೆ ಹೇಗೆ ಅಂಕಿ–ಅಂಶಗಳನ್ನು ಪಡೆದುಕೊಳ್ಳಬೇಕು ಎನ್ನುವುದರ ಬಗ್ಗೆ ನನಗೆ ಸ್ಪಷ್ಟತೆಯಿಲ್ಲ. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಇದರ ಬಗ್ಗೆ ತಿಳಿದುಕೊಂಡಿರುತ್ತಾರೆಂದು ನಿಮಗೆ ಅನ್ನಿಸುತ್ತದೆಯೇ? ನನ್ನ ಗಂಡನ ಆದಾಯದ ಬಗ್ಗೆ ನನಗೆ ಸರಿಯಾಗಿ ತಿಳಿದಿಲ್ಲ ಮತ್ತು ನಾನು ಹೇಗೆ ಅದನ್ನು ಅಂದಾಜುಗೊಳಿಸಬಲ್ಲೆ, ಏಕೆಂದರೆ ನನ್ನ ಗಂಡ ವೃತ್ತಿಪರರಾಗಿದ್ದು ಪ್ರಾಜೆಕ್ಟಗಳ ಆಧಾರದ ಮೇಲೆ ಸಂಪಾದನೆ ಮಾಡುತ್ತಾರೆ. |
| ಶ್ರೀ ಶರ್ಮಾ | ಯೋಚನೆ ಮಾಡಬೇಡಿ, ಶ್ರೀಮತಿ ಚಡ್ಡಾ, ನಾವೇನು ಸಮೀಕ್ಷೆಯನ್ನು ನಿಖರವಾಗಿ ನಡೆಸುತ್ತಿಲ್ಲ. ನಮ್ಮ ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳ ಮೇಲಾಗುವ ಪರಿಣಾಮಗಳತ್ತ ದೃಷ್ಟಿಹರಿಸಿ. ಹಾಗಾಗಿ ನಾವು ಮೂರು ವಿಸ್ತಾರವಾದ ವರ್ಗೀಕರಣಗಳನ್ನು ಮಾಡಿಕೊಂಡಿದ್ದು, ವಿದ್ಯಾರ್ಥಿಯ ಸ್ಥಿತಿಗತಿಯು ಉತ್ತಮವಾಗಿದ್ದು ಮತ್ತು ಆತನಿಗೆ ಮೂಲಭೂತವಾದ ಆಹಾರ, ಬಟ್ಟೆ ಮತ್ತು ವಸತಿಯನ್ನು ಹೊಂದಿದ್ದರೆ ಅದನ್ನು ನಾವು A ವರ್ಗವೆಂದು ಗುರುತಿಸಬಹುದು. |
| ಶ್ರೀಮತಿ ಕಾಜ಼ಿ | ಕೇವಲ ಮಧ್ಯಾಹ್ನದ ಬಿಸಿಯೂಟಕ್ಕಾಗಿ ಮಾತ್ರ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದರೆ ಅವರನ್ನು C ಎಂದು ವರ್ಗೀಕರಿಸಬಹುದು. ನನಗೆ ಇವರುಗಳ ಬಗ್ಗೆ ಹೆಚ್ಚಿನ ಕಾಳಜಿಯಿದ್ದು, ನಾವು ಅವರಿಗೆ ಹೆಚ್ಚಿನ ಗಮನವನ್ನು ನೀಡುತ್ತಿಲ್ಲವೇನೊ ಎಂದು ಅನ್ನಿಸುತ್ತದೆ. ನಾವು ನಿಜವಾಗಲೂ ನಮ್ಮ ಬಳಿಗೆ ಬಂದು ಪೆನ್ಸಿಲ್ ಹಾಗೂ ಪಠ್ಯ ಪುಸ್ತಕಗಳನ್ನು ಕೇಳುವ ವಿದ್ಯಾರ್ಥಿಗಳನ್ನು ನೋಡಿಕೊಳ್ಳುವಲ್ಲಿ ಹೆಚ್ಚಿನ ಆಸ್ಥೆ ವಹಿಸುತ್ತಿದ್ದೇವೆ–ಇಂತಹ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿರಬಹುದು? ಅವರಿಗೆ ಕೇಳಲು ಮುಜಗರ ಅಥವಾ ಸಂಕೋಚವಿರಬಹುದು. ಅವರೆಲ್ಲರನ್ನೂ ಈ ಗುಂಪಿನ ವಿದ್ಯಾರ್ಥಿಗಳೆಂದು ಮತ್ತು ಇಂದಿನ ಸಂದರ್ಭದಲ್ಲಿ ಕೆಳಮಟ್ಟದಲ್ಲಿ ಸಾಧನೆಯನ್ನು ತೋರಿಸುತ್ತಿದ್ದಾರೆಂದು ಗುರುತಿಸೋಣ. |
| ಶ್ರೀಮತಿ ಚಡ್ಡಾ | ಶ್ರೀ ಶರ್ಮಾ, ನೀವು ನನ್ನನ್ನು ಎಚ್ಚರಿಸುವವರು (reminder) ಆದರೆ, ನಾನು ಕೆಲಸಗಳಲ್ಲಿ ಸ್ಥಗಿತಗೊಂಡಾಗ ನಿಮ್ಮ ಸಹಾಯವನ್ನು ಕೇಳಬಹುದು |
| ಶ್ರೀ ಶರ್ಮಾ | ಖಂಡಿತಾ, ಶ್ರೀಮತಿ ಚಡ್ಡಾ! ಮತ್ತು ಶ್ರೀಮತಿ ಮೆಹ್ತಾ ತಾವು ನನಗೆ ಎಚ್ಚರಿಸುವವರು (reminder) ಆಗಬಹುದೆಂದು ಎಣಿಸುತ್ತೇನೆ. |
| ಶ್ರೀಮತಿ ಮೆಹ್ತಾ | ಖಂಡಿತವಾಗಿ! |
| ಶ್ರೀಮತಿ ಕಾಜ಼ಿ | ಒಳ್ಳೆಯದು ಇದೀಗ ಎಲ್ಲರದೂ ಬಗೆಹರಿದಿದೆ. ನಮಗೆ ವಹಿಸಿರುವ ಪ್ರತಿಯೊಬ್ಬರ ಜವಾಬ್ದಾರಿಗಳನ್ನು ಪರೀಶಿಲಿಸಲೇನು, ಪ್ರತಿಯೊಬ್ಬರಿಗೂ ಒಬ್ಬ ಗೆಳೆಯ/ತಿಯಿದ್ದಾರೆ ಮತ್ತು ಪ್ರತಿಯೊಬ್ಬರು ವಿದ್ಯಾರ್ಥಿಗಳು ಮತ್ತು ಶಿಕ್ಷಕೇತರ ಸಿಬ್ಬಂದಿ ವರ್ಗದವರನ್ನು, ಮತ್ತು ಪೋಷಕರನ್ನು ತೊಡಗಿಸಿಕೊಳ್ಳಲಿದ್ದೀರಿ. ಸಾಧ್ಯವಾದಲ್ಲಿ ಮುಂದಿನ ಸಭೆಯಲ್ಲಿ ಸಂಗ್ರಹಿಸಿದ ಮಾಹಿತಿಯು ನಮ್ಮ ತರಗತಿಯಲ್ಲಿನ ಕೆಲಸವಾಯಿತು ಎಂಬುದರ ಬಗ್ಗೆ ಚರ್ಚಿಸೋಣ |

ಎಲ್ಲರೂ ಧನ್ಯವಾದಗಳು ಶ್ರೀಮತಿ ಕಾಜ಼ಿ

### ಚಟುವಟಿಕೆ 9: ಶ್ರೀಮತಿ ಕಾಜ಼ಿಯವರ ಸಭೆಯ ವಿಮರ್ಶೆ

ಶಿಕ್ಷಕರೊಂದಿಗಿನ ಚರ್ಚೆಯು ಅತ್ಯುನ್ನತ ಮಟ್ಟದ ಸಹಕಾರವನ್ನು ಮತ್ತು ಅಂಕಿ–ಅಂಶಗಳ ಸಂಗ್ರಹಣೆಯ ಗುರಿ ಮತ್ತು ಮೌಲ್ಯಗಳ ಬಗ್ಗೆ ಹಂಚಿಕೊಂಡಿರುವ ಒಪ್ಪಂದವನ್ನು ತೋರಿಸುತ್ತದೆ. ನೀವು ನಿಮ್ಮ ಕಲಿಕಾ ಡೈರಿಯಲ್ಲಿ ನಿಮಗೆ ಅನ್ನಿಸಿರುವ ಯಾವ ಅಂಶಗಳು ಸಭೆಯನ್ನು ಯೋಜನೆಗಳನ್ನು ಪೂರ್ಣಗೊಳಿಸುವವರೆಗೆ ಕೊಂಡೊಯ್ಯಲು ಸಹಾಯ ಮಾಡಿದವು ಎನ್ನುವುದನ್ನು ಬರೆದಿಟ್ಟುಕೊಳ್ಳಿ.

#### ಚರ್ಚೆ

ಶ್ರೀಮತಿ ಕಾಜ಼ಿ ಹೇಗೆ ಅಂಕಿ–ಅಂಶಗಳ ಸಂಗ್ರಹಣೆಯ ಕಾರ್ಯಯೋಜನೆಯನ್ನು ಪುನರ್ ಮನನ ಮಾಡಿದರು ಎಂಬುದರ ಬಗ್ಗೆ ಕೇಳಿಸಿಕೊಂಡಿದ್ದೀರಾ– ಕೆಲಸಗಳ ಬಗ್ಗೆ ಆಕೆಗಿರುವ ಸ್ಪಷ್ಟತೆ ಮತ್ತು ಅದರ ಉದ್ದೇಶ ಆಕೆಗೆ ತನ್ನ ತಂಡವನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ಸಹಾಯ ಮಾಡಿತು. ಆಕೆ ಯಾರಿಗೆ ಸ್ಪಷ್ಟತೆಯಿರಲ್ಲಿಲ್ಲವೂ ಅವರಿಗೆ ಸಹಾಯದ ಹಸ್ತವನ್ನು ಚಾಚಿದರು ಮತ್ತು ಪರಸ್ಪರ ಬೆಂಬಲ ನೀಡಲು ಕೂಡ ಸಹಾಯ ಮಾಡಿದರು. ಶಿಕ್ಷಕರು ತಮಗೆ ಸರಿಹೊಂದುವಂತಹ ಕ್ಷೇತ್ರಗಳನ್ನು ಸ್ವತಃ ಆಯ್ಕೆ ಮಾಡಿಕೊಳ್ಳುವುದನ್ನು ಕೇಳಿದಿರಿ ಏಕೆಂದರೆ ಆ ಕ್ಷೇತ್ರಗಳು ಅವರಿಗೆ ಕೆಲಸ ಮಾಡಲು ಸುಲಭವಾಗುತ್ತದೆ. ಕಾರ್ಯಯೋಜನೆಯ ಸಭೆಯ ಕೊನೆಯಲ್ಲಿ ಆಕೆಯ ತಂಡದಲ್ಲಿ ಯಾವುದೇ ಗೊಂದಲಗಳಿರಲಿಲ್ಲ ಮತ್ತು ತಮ್ಮ ತಮ್ಮ ಹೊಣೆಗಾರಿಕೆಗಳ ಬಗ್ಗೆ ಅರಿತುಕೊಂಡಿದ್ದರು. ಪ್ರತಿಯೊಬ್ಬರಿಗೂ ತಮ್ಮ ಕೆಲಸದ ಜವಾಬ್ದಾರಿಗಳೇನೂ ಎಂಬುದು ತಿಳಿದಿತ್ತು ಮತ್ತು ಎಲ್ಲರಿಗೂ ಸಮಾಧಾನವಾಗುವ ರೀತಿಯಲ್ಲಿ ಕೆಲಸಗಳನ್ನು ವಿಭಜಿಸಲಾಗಿತ್ತು.

ಶಾಲಾ ನಾಯಕರು ತಮ್ಮ ತಂಡದವರಿಗೆ ಏಕೆ ಅಂಕಿ–ಅಂಶಗಳನ್ನು ಬಳಸಿಕೊಳ್ಳಬೇಕು ಎನ್ನುವುದನ್ನು ಅರ್ಥಮಾಡಿಸಬೇಕು, ಮತ್ತು ಅದನ್ನು ಹೇಗೆ ವ್ಯಾಖ್ಯಾನಿಸಬೇಕು ಮತ್ತು ಬಳಸಬೇಕು. ಹಾಗಾದಾಗ ಮಾತ್ರ ಸಮಾನವಾದ ಕಲಿಕೆಯ ವಾತಾವಾರಣವನ್ನು ನಿರ್ಮಾಣ ಮಾಡುವಲ್ಲಿ ಹೆಚ್ಚಿನ ಯಶಸ್ವಿಯಾಗಬಹುದು. ಕೇವಲ ಆದೇಶಗಳನ್ನು ಹೊರಡಿಸಿ ಹಿಂದಕ್ಕೆ ನಿಂತುಕೊಳ್ಳ ಬೇಡಿ– ನಿಮ್ಮನ್ನು ನಿರಂತರವಾಗಿ ತೊಡಗಿಸಿಕೊಳ್ಳಿ. ನಿಮ್ಮ ತಂಡದ ಸದಸ್ಯರು ಏನೆಂದು ಯೋಚಿಸುತ್ತಿದ್ದಾರೆ ಮತ್ತು ಅವರಿಗೆ ಏನನ್ನಿಸುತ್ತಿದೆ ಎಂಬುದನ್ನು ಕಂಡುಕೊಳ್ಳಿ, ಮತ್ತು ನಿಮ್ಮನ್ನು ಯಾವಾಗ ಬೇಕಾದರೂ ಸಂಪರ್ಕಿಸಬಹುದು ಎಂಬುದನ್ನು ನಿಮ್ಮ ತಂಡದವರಿಗೆ ಅರ್ಥ ಮಾಡಿಸಿ ಮತ್ತು ಅವರು ಮೊದಲಿನಿಂದಲೇ ನಿಮ್ಮನ್ನು ಸಂಪರ್ಕಿಸಬಹುದು ಎಂದೂ, ಹೆಚ್ಚು ಹೆಚ್ಚು ಅವರನ್ನು ಮೆಚ್ಚಿದಷ್ಟೂ ಅವರು ನಿಮ್ಮನ್ನು ಸಂಪರ್ಕಿಸುತ್ತಾರೆ. ನಿಮ್ಮೊಂದಿಗೆ ನಿರಂತರವಾಗಿ ಸಂಪರ್ಕದಿಲ್ಲದವರ ಅನುಸರಣೆ ಮಾಡಿ. ಈ ರೀತಿಯಲ್ಲಿ ಆದಾಗ ನೀವು 'ನಿರಂತರವಾಗಿ ತೊಡಗಿಕೊಂಡತಾಗುತ್ತದೆ' ಅದು ನಿಮ್ಮ ಮುಂದಾಳತ್ವದ ಮುಖ್ಯ ಪಾತ್ರದ ಭಾಗ, ಕೈಗೆತ್ತಿಕೊಂಡಿರುವ ಕೆಲಸಗಳಿಗೆ ಉತ್ತೇಜನ ಮತ್ತು ಮೌಲ್ಯಮಾಪನವನ್ನು ಮಾಡಿದಂತಾಗುತ್ತದೆ.

ನೀವು ತೋರಿಸುವ ಆಸಕ್ತಿ ಮತ್ತು ಕೇಳುವ ಪ್ರಶ್ನೆಗಳು ನಿಮ್ಮ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಸಂಕೇತಗಳಾಗುತ್ತವೆ. ಇದು ಅಂಕಿ–ಅಂಶಗಳನ್ನು ಕ್ರೋಢೀಕರಿಸುವಾಗ ಮುಖ್ಯವಾಗುತ್ತದೆ. ಯಾವುದೇ ರೀತಿಯಲ್ಲೂ ಆಸಕ್ತಿಯಿಲ್ಲದೆ ಅಂಕಿ–ಅಂಶಗಳನ್ನು ಸಂಗ್ರಹಿಸಿದಾಗ ಅದು ಕೇವಲ ಆಡಳಿತಾತ್ಮಕ ಕೆಲಸವಾಗಿಬಿಡುತ್ತದೆ. ನಿಮ್ಮ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಬೆಂಬಲಿಸುವ ಮೂಲಕ ನಿಮ್ಮ ಆಸಕ್ತಿಯನ್ನು ತೋರ್ಪಡಿಸಿ. ಯಾವಾಗಲೂ ಇದರ ಉದ್ದೇಶ ಎಲ್ಲರ ಕಲಿಕೆಯನ್ನು ಉತ್ತಮಪಡಿಸುವದಾಗಿದೆ ಎಂದು ಒತ್ತಿ ಹೇಳಿ.

# 4 ಶಾಲಾ ಆಧಾರಿತ ಚಟುವಟಿಕೆಗಳ ಕಾರ್ಯ ಯೋಜನೆಯಲ್ಲಿ ಅಂಕಿ–ಅಂಶಗಳನ್ನು ಬಳಸಿಕೊಳ್ಳುವುದು

ಒಮ್ಮೆ ಅಂಕಿ–ಅಂಶಗಳನ್ನು ಕ್ರೋಢಿಕರಿಸಿದ ನಂತರ ಅವುಗಳ ವ್ಯಾಖ್ಯಿನಿಸಬೇಕು ಮತ್ತು ಕಾರ್ಯ ಯೋಜನೆಯನ್ನು ರೂಪಿಸುವುದು ನಾಯಕರ ಚಟುವಟಿಕೆಯಾಗುತ್ತದೆ. ಮಾಹಿತಿಯಿಲ್ಲದ ವ್ಯಾಖ್ಯಾನುವ ಸ್ವಲ್ಪ ಮಟ್ಟಿನ ಮೌಲ್ಯ ಹೊಂದಿರುತ್ತದೆ. ರೂಢಿಯಲ್ಲಿರುವ ಅಭ್ಯಾಸಗಳನ್ನು ಅಂಕಿ–ಅಂಶಗಳು ಮತ್ತು ಸಾಕ್ಷ್ಯಧಾರಗಳನ್ನು ಬಳಸಿಕೊಳ್ಳುವುದು ಹೊಸ ದೃಷ್ಟಿಕೋನವಗುತ್ತದೆ, ಹಾಗಾಗಿ ನಿಮ್ಮ ತಂಡಕ್ಕೆ ಅಂಕಿ–ಅಂಶಗಳು ಹೇಳುವುದನ್ನು ಆಧರಿಸಿ ವಿದ್ಯಾರ್ಥಿಗಳ

ಕಲಿಕೆಯನ್ನು ಉತ್ತಮಪಡಿಸಲು ಚಾಲ್ತಿಯಲ್ಲಿರುವ ರೂಢಿಗಳಲ್ಲಿ ಬದಲಾಯಿಸಲು ಅಥವಾ ಸೂಕ್ತವಾದ ಯಾವ ರೀತಿಯ ಕಾರ್ಯಕ್ರಮವನ್ನು ರೂಪಿಸಬೇಕು ಎಂದು ನಿರ್ಧರಿಸಲು ಬೆಂಬಲವನ್ನು ನೀಡಬೇಕು.

ಕೇಸ್ ಸ್ಟಡಿ–3ನ್ನು ಓದಿ ಮತ್ತು ವಿಭಿನ್ನತೆಯ ಮಾಹಿತಿಗಳನ್ನು ಕಲೆಹಾಕುವ ಪ್ರಕ್ರಿಯೆಯು ವಿದ್ಯಾರ್ಥಿಗಳನ್ನು ಹೇಗೆ ಸಮರ್ಥರನ್ನಾಗಿಸಿತು ಮತ್ತು ಪರಿಣಾಮಕಾರಿ ಕಲಿಕೆದಾರರನ್ನಾಗಿಸಲು ಸಹಾಯ ಮಾಡಿತು ಎನ್ನುವುದನ್ನು ಗಮನಿಸಿ.

## ಕೇಸ್ ಸ್ಟಡಿ–3: ತರಗತಿಯಲ್ಲಿ ಅಂಕಿ–ಅಂಶಗಳನ್ನು ಬಳಸುವುದು

ಶಾಲಾ ಸಮುದಾಯ ಕುರಿತಾದ ಹೆಚ್ಚಿನ ಅಂಕಿ–ಅಂಶಗಳು ಬಂದಿರುವುದು ಸಂದರ್ಶನಗಳಿಂದ, ಕ್ಷೇತ್ರ ಭೇಟಿಗಳಿಂದ ಮತ್ತು ಸಮೀಕ್ಷೆಗಳಿಂದ. ಅಂಕಿ–ಅಂಶಗಳ ಸಂಗ್ರಹಣೆಯನ್ನು ಪ್ರತ್ಯೇಕವದ ಗುಂಪುನಿರ್ವಹಿಸಿದ್ದು ಈ ಗುಂಪಿನ ಮುಂದಾಳತ್ವವನ್ನು ಶಿಕ್ಷಕರು ವಹಿಸಿಕೊಂಡಿದ್ದಾರೆ. ಪ್ರತಿಯೊಂದು ಗುಂಪು ತನ್ನದೇ ಆದ ಅಂಕಿ–ಅಂಶಗಳನ್ನು ಸಂಗ್ರಹಿಸಿದ್ದು ಅವುಗಳನ್ನು ಚಾರ್ಟಗಳಲ್ಲಿ ಬರೆದು ಆವರಣದಲ್ಲಿ ತಾವು ಕಂಡುಕೊಂಡಿದ್ದನ್ನು ಮಂಡಿಸುತ್ತಾರೆ. ಮಂಡಿಸಿರುವ ಮಾಹಿತಿಯನ್ನು ಬೇರೆ ಬೇರೆ ತರಗತಿಗಳಲ್ಲಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಮ್ಮ ಪರಿಕಲ್ಪನೆಗಳ ಬಗ್ಗೆ ತರಗತಿಗಳಲ್ಲಿ ಚರ್ಚಿಸಲು ಬಳಸುತ್ತಾರೆ

- ಸಾಮಾಜಿಕ ವಿಜ್ಞನಗದ ತರಗತಿಗಳಲ್ಲಿ ಬೇರೆ ಬೇರೆ ಕುಟುಂಬಗಳ ಸ್ಥಾನ ಮಾನಗಳಿಗೆ ಕಾರಣಗಳ ಬಗ್ಗೆ ಚರ್ಚಿಸಲಾಗುವುದು. ಅವರೆಲ್ಲರನ್ನೂ ಸಮಾನವಾಗಿ ಕಾಣಬೇಕು ಮತ್ತು ಒಂದು ಕುಟುಂಬವು ಮತ್ತೊಂದು ಕುಟುಂಬಕ್ಕಿಂತ ಉತ್ತಮವಾಗಿದೆಯೆಂದು ಹೇಳಬಾರದು.
- ಭಾಷಾ ತರಗತಿಗಳು ಕುಟುಂಬ ಎನ್ನುವ ವಿಷಯವನ್ನು ಎತ್ತಿಕೊಂಡು ತಮ್ಮದೇ ಕುಟುಂಬಗಳ ಬಗ್ಗೆ ವಿವರಿಸಿ ಮತ್ತು ದೊಡ್ಡ ಮತ್ತು ಚಿಕ್ಕ ಕುಟುಂಬಗಳಿಂದಾಗುವ ಅನುಕೂಲಗಳು ಮತ್ತು ಅನಾನುಕೂಲಗಳ ಬಗ್ಗೆ ಚರ್ಚಿಸಿ
- ಧಾರ್ಮಿಕ ಸ್ಥಳಗಳ ಪಟ್ಟಿ ಮತ್ತು ಶಾಲೆಯಲ್ಲಿರುವ ವಿದ್ಯಾರ್ಥಿಗಳು ಅನುಸರಿಸುತ್ತಿರುವ ಧರ್ಮಗಳ ಕುರಿತಾದ ಚರ್ಚೆಗಳು ಭ್ರಮೆಗಳು ಮತ್ತು ಸಾಂಪ್ರದಾಯಿಕ ನಂಬಿಕೆಗಳ ಬಗ್ಗೆಯ ಚರ್ಚೆಗಳು ಒಂದೇ ರೀತಿಯಲ್ಲಿರುತ್ತವೆ.
- ಮನೆಗಳಲ್ಲಿ ಅಡುಗೆಗಳ ಬಗ್ಗೆ ಗೃಹ ವಿಜ್ಞನ ತರಗತಿಗಳಲ್ಲಿ ಚರ್ಚಿಸಿ, ಹೇಗೆ ಬೇರೆ ಬೇರೆ ಸಮುದಯಗಳು ಅಡಿಗೆಗಳಲ್ಲಿ ಮಸಾಲೆಗಳನ್ನು ಬಳಸುತ್ತಾರೆ ಮತ್ತು ಆ ಅಡಿಗೆಗಳನ್ನು ತರಗತಿಗಳಿಗೆ ತಂದು ಅವುಗಳ ರುಚಿಯಲ್ಲಿ ಬದಲಾವಣೆಗಳನ್ನು ತಂದು ಅಭಿರುಚಿಯನ್ನು ಬದಲಾಯಿಸುತ್ತವೆ ಎಂಬುದನ್ನು ಗಮನಿಸಿ.

ಅಂಕಿ–ಅಂಶಗಳ ಸಂಗ್ರಹಣೆಯ ಚಟುವಟಿಕೆ ಮತ್ತು ಅವುಗಳ ಕ್ರೋಢೀಕರಣವು ಶಾಲೆಯಾದ್ಯಂತ ಸಂಭಾಷಿಸುವ ರೀತಿಯನ್ನೇ ಬದಲಾಯಿಸಿಬಿಟ್ಟಿರುತ್ತದೆ. ಶಾಲಾ ನಾಯಕರೊಬ್ಬರು ಹೆಮ್ಮೆಯಿಂದ ಹೇಳಿದ್ದು ಹೀಗೆ : ' ನಾವೀಗ ಏನು? ಹೇಗೆ? ಮತ್ತು ಯಾವಾಗ? ಎಂದು ಕೇಳಲಾರಂಭಿಸಿದ್ದೇವೆ, ವಿದ್ಯಾರ್ಥಿಗಳು ಅಂಕಿ–ಅಂಶಗಳೊಂದಿಗೆ ಕೆಲಸ ಮಾಡುವುದು ಎಷ್ಟು ಚೆನ್ನಾಗಿರುತ್ತದೆಂಬುದರ ಬಗೆ ಸ್ವತಹ ತಾವೇ ಅನುಭವಿಸುತ್ತಿದ್ದಾರೆ; ' ನಾವೀಗ ಇಡೀ ಶಾಲೆಯೇ ಅಚ್ಚರಿಪಡುವಂತೆ ಮಾಡಿದ್ದೇವೆ!

ಇಂತಹೆ ಒಂದು ಅಂಕಿ–ಆಂಶಗಳ ಸಂಗ್ರಹಣೆಯು ಮುಂದೆ ಸಿಗದಿರದ ಅಂಕಿ–ಅಂಶಗಳು ಅಥವಾ ಹೆಚ್ಚು ವಿವರವಾದ ಅಂಕಿ–ಅಂಶಗಳನ್ನು ಪಡೆದುಕೊಳ್ಳಲು ದಾರಿ ಮಾಡಿಕೊಡುತ್ತದೆ, ಇದರೊಂದಿಗೆ ಶಾಲಾ ನಾಯಕರು, ಶಿಕ್ಷಕರು ಅಥವಾ ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುತ್ತಾರೆ.

## ಚಟುವಟಿಕೆ 10: ನಿಮ್ಮ ವಿದ್ಯಾರ್ಥಿಗಳ ಅಂಕಿ–ಅಂಶಗಳ ಬಳಕೆ

ಶಿಕ್ಷಕರೊಂದಿಗಿನ ಚರ್ಚೆಯು ಅತ್ಯುನ್ನತ ಮಟ್ಟದ ಸಹಕಾರವನ್ನು ಮತ್ತು ಹಂಚಿಕೊಂಡಿರುವ ಒಪ್ಪಂದವನ್ನು ತೋರಿಸುತ್ತದೆ. ಕೇಸ್ ಸ್ಟಡಿಯ ಬಗ್ಗೆ ನಿಮ್ಮ ವಿದ್ಯಾರ್ಥಿಗಳೊಂದಿಗೆ ಸಾಧ್ಯತೆಗಳ ಬಗ್ಗೆ ಚರ್ಚಿಸಿ. ನಿಮ್ಮ ಶಾಲೆಯಲ್ಲೂ ಕೂಡ ಯಾವ ರೀತಿಯಲ್ಲಿ ಮಾಹಿತಿಯನ್ನು ಕ್ರೋಢೀಕರಿಸುತೀರಾ? ನೀವು ಸಂಗ್ರಹಿಸಿದ ಅಂಕಿ–ಅಂಶಗಳು ಹೇಗೆ ಶಾಲೆಯ ಪಠ್ಯ ಚಟುವಟಿಕೆಗಳಿಗೆ ಸಂಪರ್ಕ ಕಲ್ಪಿಸುತ್ತೀರಾ?

ಇದನ್ನು ನಿಮ್ಮ ಶಾಲೆಯಲ್ಲಿ ಪಠ್ಯಗಳ ಮೇಲೆ ಪರಿಣಾಮ ಬೀರಲು ಮತ್ತು ವ್ಯಾಪಕವಾದ ಅಪೇಕ್ಷಣೀಯ ಬದಲಾವಣೆಗಳನ್ನು ತರಲು ಶಿಕ್ಷಕರೊಂದಿಗೆ ಮತ್ತು ವಿದ್ಯಾರ್ಥಿಗಳೊಂದಿಗೆ ಬಳಸಿಕೊಳ್ಳುತ್ತೀರಾ ಎನ್ನುವುದರ ಬಗ್ಗೆ ಚರ್ಚಿಸಿ.

### ಚರ್ಚೆ:

ನಿಮಗೆ ಈಗಾಗಲೇ ಒಂದು ರೀತಿಯಲ್ಲಿ ಅಸಮಾಧಾನವೆನಿಸುತ್ತಿರಬಹುದು ಹೇಗೆ ವಿದ್ಯಾರ್ಥಿಗಳನ್ನು ಅತ್ಯುತ್ತಮ ರೀತಿಯಲ್ಲಿ ಬಳಸಿಕೊಳ್ಳಬಹುದು

ಎನ್ನುವುದರ ಬಗ್ಗೆ. ಇದಕ್ಕೆ ಕಾರಣಗಳು:

- ಒಂದು ಸಮುದಾಯದ ಸೂಕ್ಷ್ಮತೆಗಳ ಬಗ್ಗೆ ಅರಿವಾಗಿರುವುದು
- ನೀವು ಯಾವುದೆ ಒಬ್ಬ ವ್ಯಕ್ತಿಯನ್ನು ಪ್ರತ್ಯೇಕವಾಗಿ ಅಥವಾ ಗುಂಪನ್ನಾಗಲಿ ಎತ್ತಿ ಉದಾಹರಿಸಲು ಇಚ್ಛಿಸುತ್ತಿಲ್ಲ
- ಅಂಕಿ–ಅಂಶಗಳ ಗುಂಪುಗಳ ಅನಾಮಧೇಯತೆಯನ್ನು ಕಾಪಾಡಿಕೊಳ್ಳುವುದು ಕಷ್ಟ

ಈ ಎಲ್ಲಾ ಸೂಕ್ಷ್ಮತೆಗಳು ಪ್ರಮುಖವಾದವು ಮತ್ತು ಅತ್ಯಂತ ಜಾಗೂರುಕತೆಯಿಂದ ನಿರ್ವಹಿಸಬೇಕಿದೆ. ಯಾವುದೇ ವಿದ್ಯಾರ್ಥಿಗಳ ಗುಂಪು ಅಥವಾ ವ್ಯಕ್ತಿಗಳನ್ನು ಉದಾಹರಿಸಿ ಎಲ್ಲರಿಗೂ ತಿಳಿಯುವಂತೆ ಮಾಡಬಾರದು ಏಕೆಂದರೆ ಇದು ಅವರಲ್ಲಿ ಆತಂಕ, ಪತ್ತಡ ಅಥವಾ ನೋವನ್ನುಂಟುಮಾಡಬಹುದು. ಇದರ ಅರ್ಥ ಇವರ ಅವಶ್ಯಕತೆಗಳನ್ನು ನಿರ್ಲಕ್ಷಿಸುವುದು ಎಂದಲ್ಲ, ಆದರೆ ವಿದ್ಯಾರ್ಥಿಗಳು ಮತ್ತು ಸಮುದಾಯದೊಂದಿಗೆ ಮಾತನಾಡುವಾಗ ತಮ್ಮ ಪಾತ್ರ ಹಾಗೂ ರೀತಿನೀತಿಗಳ ಬಗ್ಗೆ ಗಮನಹರಿಸಬೇಕು. ಉದಾಹರಣೆಗೆ ಕೆಲವು ಸನ್ನೀವೇಶಗಳಲ್ಲಿ ಶಿಕ್ಷಕರು ಕೈಗೆತ್ತಿಕೊಳ್ಳುವ ಚರ್ಚೆಗಳಲ್ಲಿ ನೀಡುವ ಅಂಕಿ–ಅಂಶಗಳು ಆ ಶಾಲೆಯ ನಿರ್ದಿಷ್ಟವಾದ ಅಂಕಿ–ಅಂಶವಾಗಿರದೆ ಯಾವುದೇ ರಾಜ್ಯ ಅಥವ ರಾಷ್ಟ್ರ ಅಥವಾ ಘಟನೆಗಳಿಗೆ ಸಂಬಂಧಿಸಿದ್ದಾಗಿದ್ದರೆ ಒಳ್ಳೆಯದು.

# 5 ಶಾಲಾ ಸಮುದಾಯದೊಂದಿಗೆ ಅಂಕಿ–ಅಂಶಗಳ ಹಂಚಿಕೊಳ್ಳುವಿಕೆ ಮತ್ತು ಪ್ರತಿನಿಧಿಸುವಿಕೆ

ಅಂಕಿ–ಅಂಶಗಳನ್ನು ಕಡತದಲ್ಲಿರಿಸಿ ಬಿಡಬಹುದು ಮತ್ತು ಕೋರಿಕೆಗಳು ಬಂದಾಗ ಮಾತ್ತ ಬಳಸಬಹುದು ಅದನ್ನು ಹಂಚಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ. ಪರ್ಯಾಯವಾಗಿ ನೀವು ಇದನ್ನು ನಿಮ್ಮ ಶಾಲೆಯಲ್ಲಿ ಪೂರಕವಾದ ಕಲಿಕೆಯ ವಾತಾವರಣವನ್ನು ರೂಪಿಸಲು ಬಳಸಿಕೊಳ್ಳಬಹುದು. ನೀವು ಸಂಗ್ರಹಿಸುತ್ತಿರುವ ಅಂಕಿ–ಅಂಶಗಳ ಕೆಲಭಾಗಗಳನ್ನು ನಿಮ್ಮ

ಕಛೇರಿಯಲ್ಲಿ, ತರಗತಿಗಳಲ್ಲಿ, ಶಾಲಾ ಆವರಣಗಳಲ್ಲೂ ಕೂಡ ಪ್ರದರ್ಶಿಸುವ ಮೂಲಕ, ವರ್ಷವಿಡಿ ನಿಮ್ಮ ಕೆಲಸಗಳ ಬಗ್ಗೆ ಮಾಹಿತಿ ನೀಡಲು ಬಳಸಿಕೊಳ್ಳಬಹುದು. ಕಚ್ಚಾ ಅಂಕಿ–ಅಂಶಗಳನ್ನು ಪ್ರದರ್ಶಿಸಲು ಕಷ್ಟ. ಅಂಕಿ–ಅಂಶಗಳನ್ನು ಚಾರ್ಟಗಳು, ಪಟ್ಟಿಗಳು, ಟೇಬಲ್‌ಗಳು, ನಕ್ಷೆಗಳು, ಚಿತ್ರಗಳು,ಬಾರ್ ಚಾರ್ಟಗಳು ಮತ್ತು ಪೈ ಚಾರ್ಟಗಳು, ಮಾದರಿಗಳು ಅಥವಾ ಭಿತ್ತಿಚಿತ್ರಗಳ ಮೂಲಕ ಪ್ರದರ್ಶಿಸುವುದರಿಂದ ಅರ್ಥಮಾಡಿಕೊಳ್ಳಲು ಮತ್ತು ವ್ಯಾಖ್ಯಾನಿಸಲು ಸುಲಭ. ಕೆಲವೊಂದು ಅಂಕಿ–ಅಂಶಗಳಾದ ವಿದ್ಯಾರ್ಥಿಗಳ ಸಾಮಾಜಿಕ–ಆರ್ಥಿಕ ರಚನೆ ಅಥವಾ ಶಿಕ್ಷಕರ ಹಿನ್ನೆಲೆ ಮೊದಲಾದವು ವರ್ಷವಿಡಿ ವಾಸ್ತವಿಕವಾಗಿರುತ್ತವೆ. ಆದರೆ ಇನ್ನಿತರ ಅಂಕಿ–ಅಂಶಗಳು ಬದಲಾಗಬಹುದು ಅಥವಾ ಒಂದಷ್ಟು ಸಮಯದ ನಂತರ ಮತ್ತಷ್ಟನ್ನು ಸೇರಿಸಬೇಕಾಗುತ್ತದೆ ಹಾಗೇಯೇ ವಿದ್ಯಾರ್ಥಿಗಳ ಆರೋಗ್ಯದ ಸ್ಥಿತಿಯ ಬಗ್ಗೆ ಕೂಡ. ನೀವು ಅಂಕಿ ಅಂಶಗಳನ್ನು ಫೈಲ್ ಮಾಡಿಡಬಹುದು ಮತ್ತು ಯಾವಗಲಾದರೂ ಕೇಳೀದಾಗ ಅದನ್ನು ಹಂಚಿಕೊಳ್ಳಬಹುದು. ಇದಕ್ಕೆ ಹೊರತಾಗಿಯೂ , ಇದನ್ನು ನಳಸಿಕೊಂಡು ಕಲಿಕೆಗೆ ಅಪೇಕ್ಷಣೀಯವಾದ ವಾತವರಣವನ್ನು ಶಾಲೆಯಲ್ಲಿ ಸೃಷ್ಟಿಸಲೂ ಕೂಡ ಬಳಸಬಹುದು. ನಿಮ್ಮ ಕಛೇರಿಯ ಒಂದು ಭಾಗದಲ್ಲಿ ಅಥವಾ ತರಗತಿಯಲ್ಲಿ, ಶಾಲೆಯ ಒಳ ಆವರಣದಲ್ಲಿ ನೀವು ಸಂಗ್ರಹಿಸಿರುವ ಮಾಹಿತಿಯನ್ನು ಪ್ರದರ್ಶಿಸಬಹುದು. ಹೀಗೆ ಪ್ರದರ್ಶಿಸುವ ಅಂಕಿ–ಅಂಶಗಳು ಚಾರ್ಟಗಳು, ಟೇಬಲ್ಗಳು, ನಕ್ಷೆಗಳು, ಚಿತ್ರಗಳು, ಬಾರ್ ಚಾರ್ಟ್‌ಗಳ, ಪೈ ಚಾರ್ಟ್‌ಗಳು, ಮಾದರಿಗಳು, ಭಿತ್ತಿಚಿತ್ರಗಳ ರೂಪದಲ್ಲಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ಅಥವಾ ವ್ಯಾಖ್ಯಾನಿಸುವ ರೀತಿಯಲ್ಲಿ ಪ್ರದರ್ಶಿಸಬಹುದು. ನಿಮ್ಮ ವಿದ್ಯಾರ್ಥಿಗಳ ಅಥವಾ ಶಿಕ್ಷಕರ ಸಾಮಾಜಿಕ–ಆರ್ಥಿಕ ವ್ಯವಸ್ಥೆಯ ರಚನೆಗಳು ಮತ್ತು ಹಿನ್ನೆಲೆಗಳು ವರ್ಷವಿಡಿ ಬದಲಾಗುವುದಿಲ್ಲ. ಇನ್ನಿತರ ಕೆಲವು ಅಂಕಿ–ಅಂಶಗಳು ಬದಲಾಗಬಹದು ಅಥವಾ ಮತ್ತಷ್ಟನ್ನು ಸೇರಿಸಬಹುದು, ಕೆಲ ಅವಧಿಯ ನಂತರ, ಅಂತಹವುಗಳ್ಲಿ ಒಂದು ವಿದ್ಯಾರ್ಥಿಗಳ ಆರೋಗ್ಯದ ಸ್ಥಿತಿಗತಿ. ನೀವು ಪ್ರದರ್ಶಿಸುವ ಯಾವುದೇ ಅಂಕಿಅಂಶಗಳು ಯಾರನ್ನೂ ಅವಮಾನಿಸುವಂತಿರಬಾರದು ಮತ್ತು ನಾಚಿಕೆಗೆ ಅವಕಾಶಮಾಡಿಕೊಡಬಾರದು. ಅಂಕಿ–ಅಂಶಗಳನ್ನು ಮಂಡಿಸುವ ರೀತಿಯು ಯಾವುದೇ ಒಬ್ಬ ವ್ಯಕ್ತಿಯತ್ತ ಬೆರಳು ತೋರಿಸುವಂತಿರಬಾರದು.

### ಚಟುವಟಿಕೆ 11– ನೀವು ಕಂಡುಕೊಂಡಿರುವುದನ್ನು ಮತ್ತು ನಿಮ್ಮ ಆದ್ಯತೆಗಳನ್ನು ಹಂಚಿಕೊಳ್ಳುವುದು

ಕೆಳಕಂಡವುಗಳ ಬಗ್ಗೆ ನಿಮ್ಮ ಅಲೋಚನೆಗಳನ್ನು ಕಲಿಕಾ ಡೈರಿಯಲ್ಲಿ ಬರೆದಿಟ್ಟುಕೊಳ್ಳಿ:

ಕೆಲಸಗಳು ನಡೆಯುತ್ತಿರುವಾಗ ನೀವು ಕಂಡುಕೊಂಡಿರುವುದನ್ನು ಮತ್ತು ಗುರುತಿಸಿರುವ ಆದ್ಯತೆಗಳನ್ನು ಹೇಗೆ ಹಂಚಿಕೊಳ್ಳುತ್ತೀರಾ?

ನೀವು ಯಾರೊಂದಿಗೆ ಹಂಚಿಕೊಳ್ಳುತ್ತೀರಾ ಎನ್ನುವುದನ್ನು ಗುರುತಿಸಬೇಕು. ಈ ನಿರ್ಧಾರ ತೆಗೆದುಕೊಳ್ಳಬೇಕೆಂದರೆ, ಪ್ರಸ್ತು ಸ್ಥಿತಿಯನ್ನು ಸವಾಲಾಗಿ ಸ್ವೀಕರಿಸಬೇಕೆಂದರೆ ಈ ಮಾಹಿತಿಯನ್ನು ಯಾರು ಹೊಂದಿರಬೇಕು. ಮತ್ತು ಅವರುಗಳು ವಿದ್ಯಾರ್ಥಿಗಳಲ್ಲಿರುವ ಕಲಿಕೆಯ ಸಾಮರ್ಥ್ಯಕ್ಕೆ ತಡೆಯುಂಟುಮಾಡಿ ತೊಂದರೆ ಮಾಡದಂತಿರುವುದನ್ನು ಖಚಿತಪಡಿಸಿಕೊಳ್ಳಿ.

ನೀವೇಕೆ ಈ ಅಂಕಿ–ಅಂಶಗಳನ್ನು ಹಂಚಿಕೊಳ್ಳಬೇಕೆಂಬುದರ ಬಗ್ಗೆ ಆಲೋಚಿಸಿ. ಇದರ ಉದ್ದೇಶವೇನು? ಇದು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸಲು ಹೇಗೆ ಕೊಡುಗೆ ನೀಡಬಲ್ಲದು?

**ಚರ್ಚೆ**

ಕೆಲವೊಮ್ಮೆ ಅಂಕಿ–ಅಂಶಗಳ ಹಂಚಿಕೆ ಕಷ್ಟವೆನಿಸಬಹುದು ಏಕೆಂದರೆ ಅಂಕಿ–ಅಂಶಗಳು ಅಹಿತಕರವಾಗಿರುತ್ತವೆ. ಹಾಗಾಗಿ ನೀವು ಜಾಗರೂಕತೆಯಿಂದ ಹೇಗೆ ಮುಂದುವರೆಯುತ್ತೀರಾ ಮತ್ತು ಎಲ್ಲರಿಗೂ ಒಪ್ಪಿಗೆಯಾಗುವಂತಹ ಕ್ರಿಯಾ ಯೋಜನೆಯನ್ನು ರೂಪಿಸಲು ಇತರರೊಂದಿಗೆ ಜಂಟಿಯಾಗಿ ಹೇಗೆ ಯೋಜನೆಗಳನ್ನು ರೂಪಿಸಲು ಬಳಸಿಕೊಳ್ಳುತ್ತೀರಾ ಎನ್ನುವುದು ಮುಖ್ಯವಾಗುತ್ತದೆ. ಇದರೊಂದಿಗೆಯೇ ಯಾವ ಅಂಕಿ–ಅಂಶಗಳು ಹಂಚಿಕೊಳ್ಳಲು ಸೂಕ್ತ ಮತ್ತಿ ಯಾವುವು ಅಲ್ಲ ಎಂಬುದರ ಬಗ್ಗೆಯೂ ಆಲೋಚಿಸಬೇಕು. ಉದಾ: ನಿಮ್ಮ ಆದ್ಯತೆಯನ್ನು ಪೋಷಕರೊಂದಿಗೆ ಹಂಚಿಕೊಳ್ಳುವಾಗ ಯಾವ ಗುಂಪಿನ ವಿದ್ಯಾರ್ಥಿಗಳು ತಮ್ಮ ಸಂಪೂರ್ಣ ಸಾಮಾರ್ಥ್ಯವನ್ನು ಬಳಸಿಕೊಳ್ಳಲು ತೊಳಲಾಡುತ್ತಿದ್ದಾರೆ ಎಂಬುದನ್ನು ಅವರೊಂದಿಗೆ ಹಂಚಿಕೊಳ್ಳುವುದು ಸೂಕ್ತವೇ? ಯಾವ ವಿದ್ಯಾರ್ಥಿಗಳನ್ನು ಉದ್ದೇಶಿಸಲಾಗಿರುತ್ತದೋ ಆ ವಿದ್ಯಾರ್ಥಿಗಳಿಗೆ ಅದನ್ನು ತಿಳಿಸುವುದು ಸೂಕ್ತವೇ?

ಅಂಕಿ–ಅಂಶಗಳು ರಾಜಕಾರಣದ ಹಿನ್ನೆಲೆಯಲ್ಲಿ ನೋಡಿದರೆ ಅದು ಯಾವುದೇ ವಿವಾದಕ್ಕೆ ಒಳಪಡದಿರಬಹುದು, ಆದರೆ ಕೆಲವರ ವಿಷಯದಲ್ಲಿ ಅದು ಸೂಕ್ಷ್ಮತೆಯ ವಿಷಯವಾಗಬಹುದು. ಕೆಲವು ಅಂಕಿ–ಅಂಶಗಳು ತಪ್ಪಾಗಿ ವ್ಯಾಖ್ಯಾನಿಸಲು ದಾರಿ ಮಾಡಿಕೊಡಬಹದು, ಹಾಗಾಗಿ ಇದರ ನಿರ್ವಹಣೆಯಲ್ಲಿ ಜಾಗರೂಕರಾಗಿರಬೇಕು. ಇದರ ಉದ್ದೇಶ ಯಾವಾಗಳೂ ಸಮಾನವಾದ ಕಲಿಕೆಯ ಫಲಿತಾಂಶವನ್ನು ಕೊಡುವಂತಹದಾಗಿರಬೇಕು. ಅಂಕಿ–ಅಂಶಗಳು ಗುರಿಯನ್ನು ತಲುಪುವ ಮಾರ್ಗವನ್ನು ಸ್ಪಷ್ಟವಾಗಿ ತೋರಿಸುವಂತಿರಬೇಕು. ಇದು ಕೆಲವು ಅಂಶಗಳನ್ನು ಹೊರಗೆಡುವ ಮೂಲಕ ಯಾರು? ಹೇಗೆ? ಏಕೆ? ಮತ್ತು ಏನು ಎನ್ನುವ ಪ್ರಶ್ನೆಗಳನ್ನು ಎಬ್ಬಿಸುವ ಮೂಲಕ ನಿಮ್ಮ ಅಂಕಿ–ಅಂಶಗಳನ್ನು ಮತ್ತಷ್ಟು ಚೂಪಾಗಿಸಿ, ನಿಮ್ಮ ಶಾಲಾ ಸಮುದಾಯದ ಮೇಲೇ ಗರಿಷ್ಠ ಮಟ್ಟದ ಪರಿಣಾಮ ಬೀರುವಂತಿರಬೇಕು

# 6 ಸಾರಾಂಶ

ಶಾಲಾ ನಾಯಕರಾಗಿ ನೀವು ನಿಮ್ಮ ಶಾಲೆಯಲ್ಲಿನ ವೈವಿಧ್ಯತೆಯನ್ನು ಸಾಕ್ಷಿ ಆಧಾರಿತ ವಿಷಯವನ್ನಾಗಿ ಸ್ಥಾಪಿಸಬೇಕು. ಇದರಿಂದಾಗಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಹೊರಗುಳಿಯುವುದನ್ನು ತಪ್ಪಿಸಬಹುದು. ಶಾಲೆಯ ವಿಭಿನ್ನತೆಗೆ ಮತ್ತಷ್ಟು ಮೌಲ್ಯವನ್ನು ಸೇರಿಸುವ ಮೂಲಕ ಪಠ್ಯಕ್ರಮವನ್ನು ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಬಹುದು.

ಈ ಘಟಕದಲ್ಲಿ ನೀವು ಯಾವ ಅಂಕಿ–ಅಂಶಗಳನ್ನು ಹೇಗೆ ಸಂಗ್ರಹಿಸಬೇಕು, ಹೇಗೆ ವಿಶ್ಲೇಷಿಸಬೇಕು ಮತ್ತು ಫಲಿತಾಂಶಗಳನ್ನು ಹಂಚಿಕೊಳ್ಳಬೇಕು ಎನ್ನುವುದನ್ನು ಗಮನಿಸಿದ್ದೀರಾ. ಶಾಲೆಗೆ ಇದು ನೇರವಾಗಿ ಅನುಕೂಲವಾಗುವ ರೀತಿಯಲ್ಲಿ ಸಹಕಾರಿ ಮತ್ತು ಸಹಯೋಗದೊಂದಿಗೆ ಕೈಗೊಳ್ಳುವ ಚಟುವಟಿಕೆಯನ್ನಾಗಿ ಮಾಡಬಹುದು ಎನ್ನುವುದರ ಬಗ್ಗೆಯೂ ನೋಡಿದ್ದೀರಾ ಮತ್ತು ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಇದರಲ್ಲಿ ತೊಡಗಿಸುವ ಮೂಲಕ ಪಠ್ಯಕ್ರಮವನ್ನು ಹೇಗೆ ಚೇತೋಹಾರಿಯನ್ನಾಗಿಸಬೇಕು, ಅವರ ಬದುಕಿಗೆ, ದಿನನಿತ್ಯದ ಜೀವನಕ್ಕೆ ಹತ್ತಿರವಾಗಿಸಬೇಕು ಎನ್ನುವದರ ಬಗ್ಗೆಯೂ ಅರಿತುಕೊಂಡಿದ್ದೀರಾ. ಈ ಅಂಕಿ–ಅಂಶಗಳನ್ನು ಪಠ್ಯ ಯೋಜನೆಯಲ್ಲಿ ಮತ್ತು ವಿದ್ಯಾರ್ಥಿಗಳ ಕಲಿಕೆಯ ಮೇಲೆ ದುಷ್ಪಾರಿಣಮಗಳ ಬೀರುವಂತಹ ಅಂಶಗಳ ಬಗ್ಗೆ ನಿರ್ದಿಷ್ಟವಾದ ಕಾರ್ಯಯೋಜನೆಯನ್ನು ಬಳಸಿಕೊಳ್ಳುವಲ್ಲಿಯೂ ಕೂಡ ಬಳಸಿಕೊಳ್ಳಬಹುದು.

ಕೆಲವು ವಿಷಯಗಳ ಕುರಿತಾದ ಅಂಕಿ–ಅಂಶಗಳ ವಿಭಿನ್ನತೆಯು ಸೂಕ್ಷ್ಮ ಸ್ವರೂಪದ್ದಾಗಿರುತ್ತದೆ ಮತ್ತು ಅವುಗಳನ್ನು ಪರಿಶೀಲಿಸುವ ಅಗತ್ಯವೂ ಇರುತ್ತದೆ, ಎಲ್ಲರ ಕಲಿಕೆಯ ಫಲಿತಾಂಶಗಳನ್ನು ಉತ್ತಮಪಡಿಸುವ ಗುರಿಯ ಬಳಕೆಗಾಗಿ ಮಾತ್ರ ಇರಬೇಕು ಮತ್ತು ಜಾಗರೂಕತಯಿಂದ ಸಂರಕ್ಷಿಸಿಡಬೇಕು.

ಈ ಘಟಕವು ಕೆಲವು ಗುಂಪುಗಳ ಮತ್ತು ಘಟಕಗಳ ಕುಟುಂಬದ ಭಾಗವಾಗಿದ್ದು ನಾಯಕತ್ವದ ದೃಷ್ಟಿಕೋನದ ಕೆಲವು ಪ್ರಮುಖ ಕ್ಷೇತ್ರಗಳಿಗೆ ಸಂಬಂಧಿಸುದುದಾಗಿದೆ. ( ನ್ಯಾಷನಲ್ ಕಾಲೇಜ್ ಆಫ್ ಸ್ಕೂಲ್ ಲೀಡರ್‌ಶಿಪ್‌ಗೆ ಸರಿಹೊಂದುವುದಾಗಿದೆ.) ಈ ಕೆಳಕಂಡವುಗಳು ಮುಂದಿನ ಕೆಲವು ಘಟಕಗಳ ಗುಂಪುಗಳನ್ನು ಅರ್ಥಮಾಡಿಕೊಳ್ಳಲು ನಿಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗಬಹುದು.

- ನಿಮ್ಮ ಶಾಲೆಗಾಗಿ ಹಂಚಿಕೊಂಡ ಪರಿಕಲ್ಪನೆಯ ರಚನೆ
- ಶಾಲೆಯ ಸ್ವ–ವಿಮರ್ಶೆಯನ್ನು ಕೈಗೆತ್ತಿಕೊಳ್ಳಲು
- ಶಾಲಾ ಅಭಿವೃದ್ಧಿ ಯೋಜನೆಯನ್ನು ಮುನ್ನೆಡಸುವುದು
- ಕಾರ್ಯ ಯೋಜನೆ ಮತ್ತು ನಿಮ್ಮ ಶಾಲೆಯಲ್ಲಿ ಬದಲಾವಣೆ ತರುವುದನ್ನು ಮುನ್ನೆಡೆಸುವುದು

- ಶಾಲೆಯಲ್ಲಿ ಯೋಜಿತ ಬದಲಾವಣೆಗಳನ್ನು ತರುವುದು

# ಸಂಪನ್ಮೂಲಗಳು

## ಸಂಪನ್ಮೂಲ: ಅಂಕಿ–ಅಂಶಗಳ ಕ್ರಿಯಾ ಯೋಜನೆಗೆ ಮಾದರಿ

**Table R1.1** *ಅಂಕಿ–ಅಂಶಗಳ ಕ್ರಿಯಾಯೋಜನೆಗಾಗಿ ಖಾಲಿಯಿರುವ ಮಾದರಿ (ನೋಡಿ ಚಟುವಟಿಕೆ 6 ಮತ್ತು 8).*

| ಅಂಕಿ–ಅಂಶಗಳ ಗುಂಪು | ವಿಶ್ಲೇಷಿಸಿದ ಅಂಶಗಳು | ಶೀರ್ಷಿಕೆಯ ಫಲಿತಾಂಶಗಳು | ಕಲಿಕೆಯ ಮೇಲಿನ ಪರಿಣಾಮಗಳು | ಕ್ರಿಯೆ(ಗಳು) | ಮೌಲ್ಯಮಾಪನ |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |

# ಸಂಪನ್ಮೂಲ 2: ಎಲ್ಲರನ್ನೂ ಒಳಗೊಳ್ಳುವುದು

## 'ಎಲ್ಲರನ್ನೂ ಒಳಗೊಳ್ಳುವುದು' ಎಂಬುದರ ಅರ್ಥವೇನು?

ಸಂಸ್ಕೃತಿ ಹಾಗೂ ಸಮಾಜದಲ್ಲಿನ ವೈವಿಧ್ಯತೆಯು ತರಗತಿಯಲ್ಲಿ ಪ್ರತಿಬಿಂಬಿಸುತ್ತದೆ. ವಿದ್ಯಾರ್ಥಿಗಳು ವಿವಿಧ ಭಾಷೆ, ಆಸಕ್ತಿ ಹಾಗೂ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಅವರು ವಿವಿಧ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳಿಂದ ಬಂದಿರುತ್ತಾರೆ.

ನಾವು ಈ ವಿಭಿನ್ನತೆಗಳನ್ನು ಕಡೆಗಣಿಸದೆ, ಸಂಭ್ರಮಿಸಬೇಕು. ಏಕೆಂದರೆ ನಮ್ಮ ಅನುಭವಾತೀತವಾದದ್ದನ್ನು ತಿಳಿಯಲು, ಒಬ್ಬರು ಮತ್ತೊಬ್ಬರನ್ನು ತಿಳಿಯಲು ಈ ವಿಭಿನ್ನತೆಗಳು ಸಾಧನವಾಗಬಲ್ಲವು. ಎಲ್ಲ ವಿದ್ಯಾರ್ಥಿಗಳು ಸ್ಥಾನಮಾನ, ಸಾಮರ್ಥ್ಯ ಹಾಗೂ ಹಿನ್ನೆಲೆಯ ಬೇಧವಿಲ್ಲದೆ ಕಲಿಯುವ ಅವಕಾಶ ಹಾಗೂ ಶಿಕ್ಷಣಕ್ಕೆ ಹಕ್ಕನ್ನು ಪಡೆದಿದ್ದಾರೆ. ಈ ಅಂಶವನ್ನು ಭಾರತದಲ್ಲಿನ ಕಾನೂನು ಹಾಗೂ ಅಂತರಾಷ್ಟ್ರೀಯ ಮಕ್ಕಳ ಹಕ್ಕುಗಳಲ್ಲಿ ಗುರುತಿಸಲಾಗಿದೆ. 2014ರಲ್ಲಿ ಪ್ರಧಾನಮಂತ್ರಿ ಮೋದಿಯವರು ತಮ್ಮ ಮೊದಲ ಭಾಷಣದಲ್ಲಿ ಭಾರತದ ಎಲ್ಲ ಪ್ರಜೆಗಳಿಗೆ ಅವರ ಜಾತಿ, ಅಥವಾ ಆದಾಯವನ್ನು ಲೆಕ್ಕಿಸದೆ ಬೆಲೆ ಕೊಡಬೇಕಾದ ಪ್ರಾಮುಖ್ಯತೆಯನ್ನು ಕುರಿತು ಒತ್ತಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಶಾಲೆಗಳು ಹಾಗೂ ಶಿಕ್ಷಕರ ಪಾತ್ರ ಬಹಳ ಮಹತ್ವಪೂರ್ಣವಾದುದಾಗಿದೆ.

ಬೇರೆಯವರ ಕುರಿತು ನಮಗೆಲ್ಲರಿಗೂ ಕೆಲವು ಅಭಿಪ್ರಾಯಗಳು ಹಾಗೂ ಪೂರ್ವಾಗ್ರಹಗಳಿದ್ದು, ಅವುಗಳನ್ನು ನಾವು ಗಮನಿಸದಿರಬಹುದು ಅಥವಾ ವ್ಯಕ್ತಪಡಿಸದಿರಬಹುದು. ಶಿಕ್ಷಕರಾಗಿ ಪ್ರತಿ ವಿದ್ಯಾರ್ಥಿಗಳ ಶೈಕ್ಷಣಿಕ ಅನುಭವವನ್ನು ಧನಾತ್ಮಕವಾಗಿ ಅಥವಾ ಋಣಾತ್ಮಕವಾಗಿ ಪ್ರಭಾವಗೊಳಿಸುವ ಶಕ್ತಿ ನಿಮ್ಮಲ್ಲಿದೆ. ನಿಮಗೆ ತಿಳಿದು ಅಥವಾ ತಿಳಿಯದೆಯೇ ನಿಮ್ಮಲ್ಲಿನ ಪೂರ್ವಾಗ್ರಹಗಳು ಹಾಗೂ ಅಭಿಪ್ರಾಯಗಳು ನಿಮ್ಮ ವಿದ್ಯಾರ್ಥಿಗಳು ಎಷ್ಟು ಸಮಾನವಾಗಿ ಕಲಿಯುತ್ತಾರೆಂಬುದರ ಮೇಲೆ ತಮ್ಮ ಪ್ರಭಾವ ಬೀರುತ್ತವೆ.

ನಿಮ್ಮ ವಿದ್ಯಾರ್ಥಿಗಳನ್ನು ಅಸಮಾನವಾಗಿ ಕಾಣುವುದರ ವಿರುದ್ಧ ರಕ್ಷಿಸಲು ನೀವು ಕೆಲವು ಕ್ರಮಗಳನ್ನು ಕೈಗೊಳ್ಳಬಹುದು.

ಕಲಿಕೆಯಲ್ಲಿ ನೀವು ಎಲ್ಲರೂ ಒಳಗೊಳ್ಳುವುದನ್ನು ದೃಢಪಡಿಸಿಕೊಳ್ಳಲು ಮೂರು ಪ್ರಮುಖ ತತ್ವಗಳು

- *ಲಕ್ಷ್ಯ ಕೊಡುವುದು(noticing)*: ಪರಿಣಾಮಕಾರಿ ಶಿಕ್ಷಕರು ಬಹುಬೇಗ ಗಮನಿಸುವವರು, ಯಥಾದೃಷ್ಟಿಯುಳ್ಳವರು ಹಾಗೂ ಸೂಕ್ಷ್ಮಗ್ರಾಹಿಗಳೂ ಆಗಿರುತ್ತಾರೆ. ಅವರು ತಮ್ಮ ವಿದ್ಯಾರ್ಥಿಗಳಲ್ಲಿ ಬದಲಾವಣೆಗಳಿಗೆ ಲಕ್ಷ್ಯ ಕೊಡುತ್ತಾರೆ. ನೀವು ಬಹುಬೇಗ ಗಮನಿಸುವವರಾಗಿದ್ದರೆ, ಒಬ್ಬ ವಿದ್ಯಾರ್ಥಿ ಏನನ್ನಾದರೂ ಉತ್ತಮವಾಗಿ ಮಾಡಿದಾಗ, ವಿದ್ಯಾರ್ಥಿಗಳಿಗೆ ಸಹಾಯ ಬೇಕಾದಾಗ ಹಾಗೂ ಅವರು ಬೇರೆಯವರೊಂದಿಗೆ ಹೇಗಿದ್ದಾರೆಂಬುದಕ್ಕೆ ಲಕ್ಷ್ಯ ಕೊಡುತ್ತೀರಿ. ವಿದ್ಯಾರ್ಥಿಗಳಲ್ಲಿನ ಬದಲಾವಣೆ, ಅವರ ಮನೆಯ ಸನ್ನಿವೇಶಗಳು ಹಾಗೂ ಇತರ ವಿಚಾರಗಳಲ್ಲಿ ಪ್ರತಿಬಿಂಬಿತವಾಗುತ್ತಿರುವುದನ್ನು ನೀವು ಅರ್ಥಮಾಡಿಕೊಳ್ಳಬಲ್ಲಿರಿ. ಎಲ್ಲರನ್ನೂ ತೊಡಗಿಸಿಕೊಳ್ಳಬೇಕಾದರೆ ನೀವು ನಿಮ್ಮ ವಿದ್ಯಾರ್ಥಿಗಳೆಡೆಗೆ ಪ್ರತಿದಿನ ನಿಯತವಾಗಿ ಲಕ್ಷ್ಯ ಕೊಡಬೇಕು ಹಾಗೂ ಭಾಗವಹಿಸಲು ಸಾಧ್ಯವಾಗದಿರುವ ಅಥವಾ ತಮ್ಮನ್ನು ಮೂಲೆಗುಂಪಾಗಿಸಲಾಗಿದೆ ಎಂದು ಭಾವಿಸಿರುವ ವಿದ್ಯಾರ್ಥಿಗಳನ್ನು ನಿರ್ದಿಷ್ಟವಾಗಿ ಗಮನಿಸಬೇಕು.
- *ಆತ್ಮಗೌರವದ ಮೇಲೆ ಕೇಂದ್ರೀಕರಿಸುವುದು* : ಉತ್ತಮ ಪ್ರಜೆಗಳೆಂದರೆ ತಾವು ಏನಾಗಿರುವರೋ ಆ ಕುರಿತು ನೆಮ್ಮದಿಯಾಗಿರುವವರು. ಅವರಿಗೆ ಆತ್ಮಗೌರವವಿದ್ದು, ತಮ್ಮ ಬಲ ಹಾಗೂ ದೌರ್ಬಲ್ಯಗಳನ್ನು ತಿಳಿದಿರುತ್ತಾರೆ. ಇತರರೊಂದಿಗೆ, ಅವರ ಹಿನ್ನೆಲೆಯನ್ನು ಲೆಕ್ಕಿಸದೆ ಧನಾತ್ಮಕ ಸಂಬಂಧಗಳನ್ನು ರೂಪಿಸಿಕೊಳ್ಳುವ ಸಾಮರ್ಥ್ಯವುಳ್ಳವರಾಗಿರುತ್ತಾರೆ. ಅವರು ತಮ್ಮನ್ನು ಹಾಗೂ ಇತರರನ್ನು ಗೌರವಿಸುತ್ತಾರೆ. ಶಿಕ್ಷಕರಾಗಿ ನೀವು ಕಿರಿಯ ವಯಸ್ಸಿನ ಮಕ್ಕಳ ಆತ್ಮ-ಗೌರವದ ಮೇಲೆ ಬಲವಾದ ಪ್ರಭಾವ ಬೀರಬಲ್ಲಿರಿ;ಈ ಶಕ್ತಿಯ ಕುರಿತು ನಿಮಗೆ ಎಚ್ಚರವಿರಲಿ ಹಾಗೂ ಇದನ್ನು ಪ್ರತಿ ವಿದ್ಯಾರ್ಥಿಯ ಆತ್ಮಗೌರವವನ್ನು ನಿರ್ಮಿಸಲು ಬಳಸಿ.
- *ನಮ್ಯತೆ (flexibility)*: ತರಗತಿಯಲ್ಲಿ ನಿಮ್ಮ ಯೋಜನೆಗಳು ಅಥವಾ ಚಟುವಟಿಕೆಗಳು ಯಾವುದೇ ನಿರ್ದಿಷ್ಟ ವಿದ್ಯಾರ್ಥಿಗೆ ಅಥವಾ ಗುಂಪುಗಳಿಗೆ ಸಹಾಯಕವಾಗುತ್ತಿಲ್ಲವೆನಿಸಿದಾಗ ಬದಲಾವಣೆಗೆ ಸಿದ್ಧರಾಗಿರಿ. ನಮ್ಯತೆಗೆ ಸಿದ್ಧರಾಗಿದ್ದಾಗ ಹೊಂದಾಣಿಕೆಗಳಿಗೆ ಅವಕಾಶವಿರುತ್ತದೆ. ಇದರಿಂದಾಗಿ ಎಲ್ಲ ವಿದ್ಯಾರ್ಥಿಗಳನ್ನು ಪರಿಣಾಮಕಾರಿಯಾಗಿ ತೊಡಗಿಸಬಹುದು.

**ಸದಾಕಾಲ ಬಳಸಬಹುದಾದ ಮಾರ್ಗಗಳು:**

- *ಉತ್ತಮ ವರ್ತನೆಗೆ ಮಾದರಿಯಾಗುವುದು:* ಎಲ್ಲ ವಿದ್ಯಾರ್ಥಿಗಳನ್ನು ಅವರ ಜನಾಂಗೀಯ ಗುಂಪು, ಧರ್ಮ ಅಥವಾ ಲಿಂಗವನ್ನು ಲೆಕ್ಕಿಸದೆ ಉತ್ತಮವಾಗಿ ನಡೆಸಿಕೊಳ್ಳುವುದಕ್ಕೆ ಉದಾಹರಣೆಯಾಗಿರಿ. ಎಲ್ಲ ವಿದ್ಯಾರ್ಥಿಗಳನ್ನು ಗೌರವದಿಂದ ಕಾಣಿರಿ ಹಾಗೂ ಎಲ್ಲರಿಗೂ ಸಮಾನವಾಗಿ ಬೆಲೆಕೊಡುವಿರೆಂಬುದನ್ನು ನಿಮ್ಮ ಪಾಠದ ಮೂಲಕ ಸ್ಪಷ್ಟಪಡಿಸಿ. ಅವರೊಂದಿಗೆ ಗೌರವದಿಂದ ಮಾತನಾಡಿ, ಸೂಕ್ತವಾಗಿದ್ದಾಗ ಅವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಿ ಮತ್ತು ಎಲ್ಲರಿಗೂ ಪ್ರಯೋಜನಕ್ಕೆ  ಬರುವ ಕಾರ್ಯಗಳನ್ನು ನಿರ್ವಹಿಸುವ ಮೂಲಕ ತರಗತಿಯ ಜವಾಬ್ದಾರಿಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ.
- *ಉನ್ನತ ನಿರೀಕ್ಷೆಗಳು:* ಸಾಮರ್ಥ್ಯವು ನಿಗದಿಪಡಿಸಿದುದಲ್ಲ; ಸೂಕ್ತವಾದ ಆಸರೆ ನೀಡಿದರೆ ಎಲ್ಲ ವಿದ್ಯಾರ್ಥಿಗಳು ಕಲಿಯಬಲ್ಲರು ಹಾಗೂ ಪ್ರಗತಿ ಹೊಂದಬಲ್ಲರು. ನಿಮ್ಮ ತರಗತಿಯಲ್ಲಿ ಯಾವುದೇ ವಿದ್ಯಾರ್ಥಿ ನೀವು ಮಾಡಿಸುತ್ತಿರುವ ಚಟುವಟಿಕೆಯನ್ನು ಅರ್ಥಮಾಡಿಕೊಳ್ಳಲು ಕಷ್ಟಪಟ್ಟರೆ, ಆ ವಿದ್ಯಾರ್ಥಿ ಎಂದಿಗೂ ಅರ್ಥಮಾಡಿಕೊಳ್ಳಲಾರನೆಂದು ಭಾವಿಸಬೇಡಿ. ಶಿಕ್ಷಕರಾಗಿ ನಿಮ್ಮ ಪಾತ್ರ ಪ್ರತಿ ವಿದ್ಯಾರ್ಥಿ ಕಲಿಯುವಂತೆ ಮಾಡಲು ಎಷ್ಟು ಉತ್ತಮವಾಗಿ ಕ್ರಮವಹಿಸಬೇಕೆಂಬುದಾಗಿದೆ. ನಿಮ್ಮ ತರಗತಿಯ ಪ್ರತಿಯೊಬ್ಬರ ಬಗ್ಗೆಯೂ ನಿಮಗೆ ಉನ್ನತ ನಿರೀಕ್ಷೆಗಳಿದ್ದರೆ, ನಿಮ್ಮ ವಿದ್ಯಾರ್ಥಿಗಳು ತಾವು ನಿರಂತರ ಪ್ರಯತ್ನದಿಂದ ಕಲಿಯಬಹುದೆಂದು ಭಾವಿಸುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ವರ್ತನೆಯ ಕುರಿತಾಗಿಯೂ ಉನ್ನತ ನಿರೀಕ್ಷೆಗಳಿರಬೇಕು. ನಿರೀಕ್ಷೆಗಳು ಸ್ಪಷ್ಟವಾಗಿರುವುದರ ಬಗ್ಗೆ ಹಾಗೂ ವಿದ್ಯಾರ್ಥಿಗಳು ಪರಸ್ಪರ ಗೌರವಿಸುವುದರ ಬಗ್ಗೆ ಖಚಿತಪಡಿಸಿಕೊಳ್ಳಿ.
- *ನಿಮ್ಮ ತರಗತಿಯಲ್ಲಿ ವೈವಿಧ್ಯತೆಯನ್ನು ನಿರ್ಮಿಸಿ:* ವಿದ್ಯಾರ್ಥಿಗಳು ಬೇರೆ ಬೇರೆ ವಿಧಾನಗಳಲ್ಲಿ ಕಲಿಯುತ್ತಾರೆ. ತಮ್ಮ ಐಡಿಯಾಗಳನ್ನು ವ್ಯಕ್ತಪಡಿಸುವುದಕ್ಕಾಗಿ ಕೆಲವರು ಬರೆಯಲು ಇಷ್ಟಪಡುತ್ತಾರೆ; ಇತರರು ಮನೋನಕ್ಷೆ (mind map), ಚಿತ್ರಗಳನ್ನು ಬಿಡಿಸಲು ಬಯಸುತ್ತಾರೆ. ಕೆಲವು ವಿದ್ಯಾರ್ಥಿಗಳು ಆಲಿಸುವುದರಲ್ಲಿ ಉತ್ತಮರು; ಕೆಲವರಿಗೆ ತಮ್ಮ ಐಡಿಯಾಗಳನ್ನು ಮಾತನಾಡುವ ಮೂಲಕ ವ್ಯಕ್ತಪಡಿಸಲು ಅವಕಾಶ ನೀಡಿದರೆ ಉತ್ತಮವಾಗಿ ಕಲಿಯುತ್ತಾರೆ. ನಿಮ್ಮ ಕ್ರಮ ಎಲ್ಲ ವಿದ್ಯಾರ್ಥಿಗಳಿಗೂ, ಎಲ್ಲ ಕಾಲಕ್ಕೂ ಹೊಂದಲಾರದು. ಆದರೆ ನಿಮ್ಮ ಬೋಧನೆಯಲ್ಲಿ ವೈವಿಧ್ಯತೆಯನ್ನು ಉಂಟುಮಾಡಿ, ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಒದಗಿಸಬಹುದು.
- *ಕಲಿಕೆಯನ್ನು ದೈನಂದಿನ ಜೀವನಕ್ಕೆ ಸಂಬಂಧೀಕರಿಸಿ:* ಕೆಲವು ವಿದ್ಯಾರ್ಥಿಗಳಿಗೆ, ನೀವು ಮಾಡಲು ತಿಳಿಸುವ ಕಲಿಕಾ ಚಟುವಟಿಕೆಗಳು ಅವರ ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟಿಲ್ಲವೆನಿಸಬಹುದು. ಅಂತಹ ಸಂದರ್ಭಗಳಲ್ಲಿ ನೀವು ಸಾಧ್ಯವಿರುವೆಡೆಯೆಲ್ಲಾ ವಿದ್ಯಾರ್ಥಿಗಳ ಸ್ವಂತ ಅನುಭವಗಳಿಂದ ಉದಾಹರಣೆಗಳನ್ನು ಬಳಸಿ ಕಲಿಕೆಗೆ ಸಂಬಂಧೀಕರಿಸುವ ಮೂಲಕ ಸ್ಪಂದಿಸಬಹುದು.
- *ಭಾಷೆಯ ಬಳಕೆ:* ನೀವು ಬಳಸುವ ಭಾಷಯ ಬಗ್ಗೆ ಜಾಗರೂಕತೆಯಿಂದ ಯೋಚಿಸಿ. ಧನಾತ್ಮಕವಾಗಿ ಭಾಷೆಯ ಬಳಕೆ ಮಾಡಿ, ಪ್ರಶಂಸಿಸಿ ಹಾಗೂ ವಿದ್ಯಾರ್ಥಿಗಳನ್ನು ಅಪಹಾಸ್ಯ ಮಾಡಬೇಡಿ. ವಿದ್ಯಾರ್ಥಿಗಳ ವರ್ತನೆಯನ್ನು ಟೀಕಿಸಿ; ಅವರನ್ನು ಕುರಿತಲ್ಲ. 'ನೀನು ಈ ದಿನ ನನಗೆ ಕಿರಿಕಿರಿ ಉಂಟುಮಾಡುತ್ತಿರುವೆ' ಎಂಬುದು ಬಹಳ ವೈಯಕ್ತಿಕವಾದ ಟೀಕೆ. ಬದಲಾಗಿ, 'ಈ ದಿನ ನಿನ್ನ ವರ್ತನೆ ಕಿರಿಕಿರಿ ಉಂಟುಮಾಡುವಂತಿದೆ. ನಿನ್ನ ಗಮನ ಕೇಂದ್ರಿಕರಿಸಲು ಕಷ್ಟವಾಗುತ್ತಿರುವುದಕ್ಕೆ ಏನಾದರೂ ಕಾರಣವಿದೆಯೇ?' ಎಂದು ಹೇಳುವುದು ಉತ್ತಮವಾದುದು ಹಾಗೂ ಹೆಚ್ಚು ಸಹಾಯ ಮಾಡುವಂತಹುದಾಗಿದೆ.
- *ಏಕಪ್ರಕಾರದ ಸವಾಲುಗಳು:* ಹೆಣ್ಣು ಮಕ್ಕಳನ್ನು ಏಕಪ್ರಕಾರವಲ್ಲದ ಪಾತ್ರಗಳಲ್ಲಿ ಗುರುತಿಸುವ ಸಂಪನ್ಮೂಲಗಳನ್ನು ಬಳಸಿ ಅಥವಾ ಶಾಲೆಗೆ ಮಹಿಳಾ ವಿಜ್ಞಾನಿಯಂತಹ ಮಾದರಿ ವ್ಯಕ್ತಿಗಳನ್ನು ಆಹ್ವಾನಿಸಿ, ನಿಮ್ಮ ಸ್ವಂತ ಲಿಂಗ ಏಕಪ್ರಕಾರದ ಬಗ್ಗೆ ಜಾಗೃತವಾಗಿರಿ; ಹೆಣ್ಣು ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸುತ್ತಾರೆ ಹಾಗೂ ಗಂಡು ಮಕ್ಕಳು ಕಾಳಜಿ ವಹಿಸುತ್ತಾರೆ ಎಂಬುದು ನಮಗೆ ತಿಳಿದಿದ್ದರೂ ವ್ಯಕ್ತಪಡಿಸುವ ರೀತಿಯಲ್ಲಿ ವ್ಯತ್ಯಾಸ ಮಾಡುತ್ತೇವೆ. ಇದಕ್ಕೆ ಕಾರಣ ಸಮಾಜದಲ್ಲಿ ಈ ಕುರಿತು ನಾವು ಮಾತನಾಡುವ ರೀತಿಯಲ್ಲಿ ವ್ಯತ್ಯಾಸವಿರುವುದನ್ನು ರೂಢಿಸಿಕೊಂಡಿರುವುದು.

**ಸುಭದ್ರವಾದ ಹಾಗೂ ಸ್ವಾಗತಿಸುವ ಕಲಿಕಾ ವಾತಾವರಣ ಸೃಷ್ಟಿಸಿ.**

ಶಾಲೆಯು ಎಲ್ಲ ವಿದ್ಯಾರ್ಥಿಗಳಿಗೂ ಸುಭದ್ರ ಹಾಗೂ ಸ್ವಾಗತಾರ್ಹವಾಗಿರಬೇಕು. ಪ್ರತಿಯೊಬ್ಬರೂ ಪರಸ್ಪರ ಸ್ನೇಹ ಹಾಗೂ ಗೌರವದಿಂದಿರಲು ಪ್ರೋತ್ಸಾಹಿಸುವ ಮೂಲಕ ನಿಮ್ಮ ವಿದ್ಯಾರ್ಥಿಗಳು ಸ್ವಾಗತಿಸಲ್ಪಡುವಂತೆ ಮಾಡಲು ನೀವು ಸಮರ್ಥರಿದ್ದೀರಿ. ವಿಭಿನ್ನ ವಿದ್ಯಾರ್ಥಿಗಳಿಗೆ ಶಾಲೆ ಹಾಗೂ ತರಗತಿಯು ಹೇಗೆ ಕಾಣಬಹುದು ಮತ್ತು ಹೇಗೆ ಅನಿಸಬಹುದೆಂದು ಯೋಚಿಸಿ. ವಿದ್ಯಾರ್ಥಿಗಳು ಕುಳಿತುಕೊಳ್ಳುವ ವ್ಯವಸ್ಥೆಯ ಕುರಿತು

ಯೋಚಿಸಿ. ದೈಹಿಕ, ಶ್ರವಣ, ದೃಷ್ಟಿ ಸಮಸ್ಯೆಯುಳ್ಳವರಿಗೆ ಪಾಠವನ್ನು ತಲುಪಲು ಅವಕಾಶವಿರುವೆಡೆ ಕುಳಿತುಕೊಳ್ಳಲು ವ್ಯವಸ್ಥೆ ಮಾಡಿ. ನಾಚಿಕೆ ಸ್ವಭಾವದವರು ಹಾಗೂ ಸುಲಭವಾಗಿ ಗಮನ ಬೇರೆಡೆಗೆ ಹರಿಸುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ಸುಲಭವಾಗಿ ಹೇಗೆ ತೊಡಗಿಸುವಂತೆ ಮಾಡಬಹುದೆಂಬುದನ್ನು ಪರಿಶೀಲಿಸಿ.

**ನಿರ್ದಿಷ್ಟ ಬೋಧನಾ ಮಾರ್ಗಗಳು:**

ಎಲ್ಲ ವಿದ್ಯಾರ್ಥಿಗಳನ್ನು ತೊಡಗಿಸಲು ನಿಮಗೆ ಸಹಾಯಕವಾಗುವ ಹಲವಾರು ನಿರ್ದಿಷ್ಟ ಮಾರ್ಗಗಳಿವೆ. ಈ ಕುರಿತು ಇತರ ಪ್ರಮುಖ ಸಂಪನ್ಮೂಲಗಳಲ್ಲಿ ಚರ್ಚಿಸಲಾಗಿದ್ದು, ಇಲ್ಲಿ ಸಂಕ್ಷಿಪ್ತ ಪರಿಚಯವನ್ನು ನೀಡಲಾಗಿದೆ.

- *ಪ್ರಶ್ನಿಸುವಿಕೆ:* ವಿದ್ಯಾರ್ಥಿಗಳನ್ನು ನೀವು ಕೈಮೇಲೆ ಮಾಡುವಂತೆ ತಿಳಿಸಿದರೆ, ಪ್ರತಿ ಬಾರಿ ಅದೇ ವಿದ್ಯಾರ್ಥಿಗಳು ಉತ್ತರಿಸಲು ಮುಂದಾಗುತ್ತಾರೆ.ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವಂತೆ ಹಾಗೂ ಉತ್ತರಗಳ ಬಗ್ಗೆ ಯೋಚಿಸುವಂತೆ ಹೆಚ್ಚು ವಿದ್ಯಾರ್ಥಿಗಳನ್ನು ತೊಡಗಿಸಲು ಇತರ ಮಾರ್ಗಗಳಿವೆ. ನೀವು ನಿರ್ದಿಷ್ಟವಾಗಿ ಪ್ರಶ್ನಿಸಬಹುದು. ಉತ್ತರಿಸಬೇಕಾದವರು ಯಾರೆಂಬುದನ್ನು ನೀವು ತೀರ್ಮಾನಿಸುವುದಾಗಿ ಇಡೀ ತರಗತಿಗೆ ತಿಳಿಸಿ;ನಂತರ ತರಗತಿಯಲ್ಲಿ ಮುಂದಿನ ಸಾಲಿನಲ್ಲಿ ಕುಳಿತವರ ಬದಲು, ಹಿಂದಿನ ಸಾಲುಗಳಲ್ಲಿ, ಗೋಡೆಯ ಬದಿಗಳಲ್ಲಿ ಕುಳಿತಿರುವವರನ್ನು ಪ್ರಶ್ನಿಸಿ. ವಿದ್ಯಾರ್ಥಿಗಳಿಗೆ 'ಆಲೋಚಿಸಲು ಸಮಯ' ಕೊಡಿ. ನಿರ್ದಿಷ್ಟ ವಿದ್ಯಾರ್ಥಿಗಳಿಂದ ಭಾಗವಹಿಸುವಿಕೆಯನ್ನು ಆಹ್ವಾನಿಸಿ. ಆತ್ಮವಿಶ್ವಾಸವನ್ನು ಬೆಳೆಸಲು ಜೋಡಿ ಅಥವಾ ಗುಂಪು ಕಾರ್ಯವನ್ನು ಬಳಸಿ, ಆ ಮೂಲಕ ಪ್ರತಿಯೊಬ್ಬರನ್ನು ಇಡೀ ತರಗತಿ ಚರ್ಚೆಗಳಲ್ಲಿ ತೊಡಗಿಸಬಹುದು.
- *ಮೌಲ್ಯಮಾಪನ:* ಪ್ರತಿಯೊಬ್ಬ ವಿದ್ಯಾರ್ಥಿಯನ್ನು ನೀವು ಉತ್ತಮವಾಗಿ ತಿಳಿಯಲು ಸಹಾಯ ಮಾಡುವ ರೂಪಾಣಾತ್ಮಕ ಮೌಲ್ಯಮಾಪನದ ವಿವಿಧ ತಂತ್ರಗಳನ್ನು ಸಿದ್ಧಪಡಿಸಿಕೊಳ್ಳಿ. ವಿದ್ಯಾರ್ಥಿಗಳಲ್ಲಿ ಅಡಗಿರುವ ಸಾಮರ್ಥ್ಯಗಳು ಹಾಗೂ ಕೊರತೆಗಳನ್ನು ಹೊರತರಲು ನೀವು ಸಾಮರ್ಥ್ಯಗಳ ಬಗ್ಗೆ ಸಾಮಾನ್ಯೀಕರಿಸಿದ ಅಭಿಪ್ರಾಯಗಳಿಂದ ಸುಲಭವಾಗಿ ಗುರುತಿಸಬಹುದಾದ ಅನಿಸಿಕೆಗಳಿಗಿಂತ ರೂಪಣಾತ್ಮಕ ಮೌಲ್ಯಮಾಪನವು ನಿಖರವಾದ ಮಾಹಿತಿಯನ್ನು ಒದಗಿಸುತ್ತದೆ. ಈ ರೀತಿ ಮಾಡುವುದರಿಂದ ನೀವು ವಿದ್ಯಾರ್ಥಿಗಳ ವೈಯಕ್ತಿಕ ಅಗತ್ಯತೆಗಳಿಗೆ ಪ್ರತಿಕ್ರಿಯಿಸಲು ಸಮರ್ಥರಾಗುವಿರಿ
- *ಗುಂಪುಕೆಲಸ ಹಾಗೂ ಜೋಡಿ ಕೆಲಸ:* ನಿಮ್ಮ ತರಗತಿಯನ್ನು ಗುಂಪುಗಳಾಗಿ ವಿಭಾಗಿಸುವ ಬಗ್ಗೆ ಹಾಗೂ ಜೋಡಿಗಳನ್ನು ರಚಿಸುವ ವಿಧಾನದ ಬಗ್ಗೆ ಜಾಗರೂಕವಾಗಿ ಯೋಚಿಸಿ. ಎಲ್ಲರನ್ನೂ ತೊಡಗಿಸಿಕೊಳ್ಳುವ ಹಾಗೂ ಒಬ್ಬರು ಮತ್ತೊಬ್ಬರಿಗೆ ಬೆಲೆ ಕೊಡುವುದನ್ನು ಪ್ರೋತ್ಸಾಹಿಸುವ ಗುರಿ ಸಾಧನೆಯ ದೃಷ್ಟಿಯಿಂದ, ಎಲ್ಲ ವಿದ್ಯಾರ್ಥಿಗಳು ಪರಸ್ಪರ ಕಲಿಯಲು ಅವಕಾಶವಿರುವ ಬಗ್ಗೆ ಹಾಗೂ ತಮಗೆ ತಿಳಿದಿರುವ ಕುರಿತು ಆತ್ಮವಿಶ್ವಾಸ ಬೆಳೆಸಿಕೊಳ್ಳುವ ಬಗ್ಗೆ ಖಾತ್ರಿಪಡಿಸಿಕೊಳ್ಳಿ. ಕೆಲವು ವಿದ್ಯಾರ್ಥಿಗಳು ಸಣ್ಣಗುಂಪುಗಳಲ್ಲಿ ಪ್ರಶ್ನೆಗಳನ್ನು ಕೇಳಲು ಹಾಗೂ ತಮ್ಮ ಐಡಿಯಾಗಳನ್ನು ವ್ಯಕ್ತಪಡಿಸಲು ಆತ್ಮವಿಶ್ವಾಸ ಹೊಂದಿರುತ್ತಾರೆ. ಆದರೆ ಇಡೀ ತರಗತಿಯ ಮುಂದೆ ಹೇಳಲು ಸಾಧ್ಯವಾಗದಿರಬಹುದು.
- *ವಿಭೇದಿಕರಿಸುವುದು:* ವಿವಿಧ ಗುಂಪುಗಳಿಗೆ ವಿವಿಧ ಕಾರ್ಯಗಳನ್ನು ಹಂಚುವುದರಿಂದ ವಿದ್ಯಾರ್ಥಿಗಳಿಗೆ ತಾವು ಇರುವ ಹಂತದಿಂದ ಆರಂಭಿಸಿ, ಮುಂದುವರೆಸಲು ಸಾಧ್ಯವಾಗುತ್ತದೆ. ಮುಕ್ತಾಂತ ಕಾರ್ಯಗಳನ್ನು (open-ended tasks) ನೀಡುವುದರಿಂದ ವಿದ್ಯಾರ್ಥಿಗಳಿಗೆ ಯಶಸ್ಸು ನಿರ್ವಹಿಸಬೇಕಾದ ಕಾರ್ಯಗಳಲ್ಲಿ ಆಯ್ಕೆ ನೀಡಿದಾಗ ಅವರ ಕಾರ್ಯದ ಕುರಿತು ಮಾಲೀಕತ್ವ ಭಾವನೆ ಮಾಡುವುದಲ್ಲದೆ, ತಮ್ಮ ಕಲಿಕೆಗೆ ತಾವೇ ಜವಾಬ್ದಾರರಾಗಲು ಸಹಾಯವಾಗುತ್ತದೆ. ವಿಶೇಷವಾಗಿ, ದೊಡ್ಡ ತರಗತಿಗಳಲ್ಲಿ, ಪ್ರತಿಯೊಬ್ಬರ ಕಲಿಕೆಯ ಅಗತ್ಯತೆಗಳನ್ನು ಗುರುತಿಸುವುದು ಕಷ್ಟ. ಆದರೆ ವಿವಿಧ ಕಾರ್ಯಗಳು ಹಾಗೂ ಚಟುವಟಿಕೆಗಳನ್ನು ಬಳಸುವ ಮೂಲಕ ಸಾಧ್ಯವಾಗುತ್ತದೆ.

# ಆಕರಗಳು/ಗ್ರಂಥಸೂಚಿ

National Council for Teacher Education (2009) *National Curriculum Framework for Teacher Education*. New Delhi: NCTE. Available from: http://www.ncte-india.org/publicnotice/NCFTE_2010.pdf (accessed 16 January 2014).

National Council of Educational Research and Training (2005) *National Curriculum Framework*, National Council of Educational Research and Training. Available from: http://www.ncert.nic.in/rightside/links/pdf/framework/english/nf2005.pdf (accessed 25 September 2014).

National University of Educational Planning and Administration (2014) *National Programme Design and Curriculum Framework*. New Delhi: NUEPA. Available from: https://xa.yimg.com/kq/groups/15368656/276075002/name/SLDP_Framework_Text_NCSL_NUEPA.pdf (accessed 14 October 2014).

# ಧನ್ಯವಾದಗಳು

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.